ಶ್ರೀ ಶಿಶಿಲ ಕ್ಷೇತ್ರ



ಶ್ರೀ ಶಿಶಿಲೇಶ್ವರ ಪ್ರಕಾಶನ, ಶಿಶಿಲ

ಬೆಳತಂಗಡಿ ತಾಲೂಕು, ದ. ಕ.

ಶಿಶಿಲದ ಪ್ರೇಕ್ಷಣೀಯ ಸ್ಥಳಗಳು

೧ ಶ್ರೀ ಶಿಶಿಲೇಶ್ವರ ದೇವಾಲಯ
೨ ಮಹಾ ಗಣಪತಿ ಮಂದಿರ
೩ ಮಹಾಕಾಳೀ ಸನ್ನಿಧಿ
೪ ಭೂತ ಸ್ಥಾನಗಳು
೫ ನಾಗವನ
೬ ಕಪಿಲಾ ನದಿಯ ಮತ್ಸ್ಯತೀರ್ಥ
೭ ಕುಮಾರ ಗುಡ್ಡೆ
೮ ಕೊಡಂಕಲ್ಲು ಮಜಲಿನ ದುರ್ಗಾ ದೇವಾಲಯ
೯ ಮೀನಗುಂಡಿ
೧೦ ಕಾವಿನಕಾನ
೧೧ ಕೋಡಿಪಾದೆ
೧೨ ಕೆಳಗಿನ ಹಿತ್ತಿಲಿನ ಭಗ್ನಗೊಂಡ ಬಸದಿ
೧೩ ಕೋಟೆ ಬಾಗಿಲಿನ ಕೋಟೆ ಮತ್ತು ಅರಮನೆಯ ಕುರುಹು
೧೪ ಕೋಟೆ ಬಾಗಿಲಿನ ಬಸದಿಯ ನೆಲಗಟ್ಟುಗಳು
೧೫ ಕೋಟೆತಾರಿನ ಕೋಟೆಯ ಕುರುಹು

[ಶಿಶಿಲ ಗ್ರಾಮದ ವಿಸ್ತೀರ್ಣ:- ೧೨೨೧೧ ಎಕ್ರೆ ೯೮ ಸೆಂಟ್ಸ್]

ಶ್ರೀ ಶಿಶಿಲ ಕ್ಷೇತ್ರ

[ಸ್ಥಳ ಪುರಾಣ ಮತ್ತು ಇತಿಹಾಸ]

ಶಾಲಿವಾಹನ ಶಕ ವರ್ಷ - ೧೯೧೨

ಕ್ರಿಸ್ತಶಕ 1990

ಶ್ರೀ ಶಿಶಿಲೇಶ್ವರ ಪ್ರಕಾಶನ, ಶಿಶಿಲ

ಬೆಳತಂಗಡಿ ತಾಲೂಕು, ದ. ಕ. 574 198


'SHREE SHISHILA KSHETHRA'

Published by
Shree Shishileshwara Prakashana
Shishila, D. K. 574 198

First Edition: 1990

Price Rs. 10-00

Printed at:
PRASANNA PRESS, PUTTUR, D. K.
Phone: 6805



ಶ್ರೀ ಪಿಪಿಲೇಶ್ವರ



ಶ್ರೀ ಮಹಾ ಗಣಪತಿ



ಶ್ರೀ ಶಿಶಿಲೇಶ್ವರ ಗರ್ಭಗೃಹ



ಶ್ರೀ ಶಿಶಿಲೇಶ್ವರ ಪಾದ [ಕುಮಾರ ಗಿರಿ]



ದೇವಾಲಯದ ಪರಿಸರ

ಅರಿಕೆ

ಶ್ರೀ ಶಿಶಿಲೇಶ್ವರ ದೇವಾಲಯವಿರುವ ಶಿಶಿಲ ಗ್ರಾಮವು ತುಳುನಾಡಿನ
ಒಂದು ಪವಿತ್ರ ಶಿವಕ್ಷೇತ್ರವಾಗಿದೆ. ಹಿಂದೆ ಅತ್ಯಂತ ವೈಭವೋಪೇತ ನಗರ
ವಾಗಿದ್ದ ಶಿಶಿಲವು ಮತ್ತೆ ಅವನತಿಗೊಂಡು ಈಗ ಮಲೆನಾಡಿನ ಚಿಕ್ಕ ಗ್ರಾಮ
ವೆನಿಸಿದೆ. ಶಿಶಿಲದ ಇತಿಹಾಸವನ್ನು ಪರಿಶೀಲಿಸಿದರೆ ಇದು ಪುರಾಣ ಪ್ರಸಿದ್ಧ
ಪ್ರದೇಶವೆಂದೂ ಪ್ರಖ್ಯಾತ ಚಾರಿತ್ರಿಕ ಸ್ಥಳವೆಂದೂ ಅರಿವಾಗುತ್ತದೆ. ಆದರೆ
ಈ ವರೆಗೆ ಶಿಶಿಲದ ಪರಿಚಯವನ್ನು ನಿರೂಪಿಸುವ ಗ್ರಂಥವು ಪ್ರಕಟವಾಗಿಲ್ಲ.
ಈ ಊರಿನಲ್ಲಿ ಹಿಂದೆ ನೆಲಸಿ ರಾಜ್ಯವನ್ನು ಆಳಿದ ರಾಜ ಸಂತತಿಗಳ ವಿವರವೂ
ತಿಳಿದಿಲ್ಲ. ಇಲ್ಲಿ ಯಾವ ಪ್ರಾಚೀನ ಶಿಲಾಶಾಸನವೂ ಲಭಿಸಲಿಲ್ಲ. ಆದುದರಿಂದ
ಶಿಶಿಲಕ್ಕೆ ಸಂಬಂಧಿಸಿದ ಪುರಾತನ ಕಥಾನಕಗಳನ್ನೂ ನಾನಾಕೃತಿಗಳಲ್ಲಿ ಗೋಚರಿ
ಸುವ ಅಸ್ಪಷ್ಟ ವಿಚಾರಗಳನ್ನೂ ಸಂಗ್ರಹಿಸಿ ಈ ಪುಸ್ತಕವನ್ನು ಬರೆಯಲಾಗಿದೆ.
ಆದರೆ ಅವಶ್ಯವಾದ ಪ್ರಮಾಣ ಗ್ರಂಥಾಧಾರಗಳು ಅಲಭ್ಯವಾದುದರಿಂದ ಶಿಶಿಲ
ಕ್ಷೇತ್ರದ ಪರಿಪೂರ್ಣ ಪೂರ್ವೇತಿಹಾಸವನ್ನು ಸಮರ್ಪಕವಾಗಿ ವಿವರಿಸಲು ಶಕ್ಯ
ವಾಗಲಿಲ್ಲ. ಇನ್ನು ಇತಿಹಾಸ ತಜ್ಞರು ನನ್ನ ಲಕ್ಷ್ಯಕ್ಕೆಬಾರದ ಅನ್ಯಪ್ರಬಂಧ
ಗಳನ್ನು ಅಧ್ಯಯನ ಮಾಡಿ ಶಿಶಿಲದ ಸಮಗ್ರ ಚರಿತ್ರೆಯನ್ನು ಬರೆಯುವುದಾದರೆ
ಈ ಪುಸ್ತಕವು ನೆರವಾಗ ಬಹುದೆಂದು ನಂಬಿರುವೆನು.

ಈ ಕೃತಿಗೆ ಆಧಾರವಾಗಿಟ್ಟು ಕೊಂಡ ವಿವಿಧ ಗ್ರಂಥಗಳ ಲೇಖಕ ಮಹಾ
ಶಯರಿಗೆ ಕೃತಜ್ಞನಾಗಿರುತ್ತೇನೆ. ನನಗೆ ಉಪಯುಕ್ತ ಸೂಚನೆಗಳನ್ನಿತ್ತ
ಶ್ರೀ। ಪು. ಶ್ರೀನಿವಾಸ ಭಟ್ಟ – ಶ್ರೀ। ಎಮ್. ಮುಕುಂದ ಪ್ರಭು – ಶ್ರೀ।
ಆರ್. ಕೆ. ಮಣಿಪಾಲ – ಶ್ರೀ। ಡಿ. ಸದಾಶಿವ ಭಟ್ಟ – ಶ್ರೀ। ಕೊ. ಅನಂತ
ಪದ್ಮನಾಭ ಶಾಸ್ತ್ರಿ ಮುಂತಾದ ವಿದ್ವಾಂಸರಿಗೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ

ಕ. ಪು. ಸೀತಾರಾಮ ಕೆದಿಲ್ಲಾಯ

ಶಿಶಿಲ

ಶ್ರೀ ಶಿಶಿಲ ಕ್ಷೇತ್ರ

ಶ್ರೀ ಶಿಶಿಲೇಶ್ವರ ದೇವಾಲಯವು ಶಿಶಿಲ ಗ್ರಾಮದ ಪ್ರಶಾಂತ ಪ್ರದೇಶದಲ್ಲಿ ವಿರಾಜಿಸುತ್ತಿದೆ. ಇದರ ಪ್ರಾಂಗಣದಲ್ಲಿ ಶ್ರೀ ಮಹಾಗಣಪತಿ ದೇವ ಮಂದಿರವು ಪರಿಶೋಭಿಸುತ್ತಿದೆ. ಇದರ ಪರಿಸರದಲ್ಲಿ ವಿಸ್ತಾರವಾದ ನಾಗ ವನವೂ ಭೂತ ಸ್ಥಾನಗಳೂ ಕಣ್ಗೊಳಿಸುತ್ತಿವೆ. ಈ ಶಿವಾಲಯದ ಉತ್ತರ ಪಾರ್ಶ್ವದಲ್ಲಿ ಕಪಿಲಾ ನದಿ ಪ್ರವಹಿಸುತ್ತಿದೆ.

ಈ ಪಾವನ ತರಂಗಿಣಿಯಲ್ಲಿ ಪೆರುವೇಲು (ರಾಜೀವ) ಜಾತಿಯ ಬೃಹದ್ಗಾತ್ರದ ಮೀನುಗಳಿಗೆ ಆಶ್ರಯಾಕರವಾದ ಮತ್ಸ್ಯತೀರ್ಥಹೃದವು ಮನೋಹರವಾಗಿ ರಂಜಿಸುತ್ತಿದೆ. ಇಲ್ಲಿಂದ ಅನತಿ ದೂರದಲ್ಲಿ ಆಗ್ನೇಯ ದಿಕ್ಕಿನಲ್ಲಿ ತಲೆಯೆತ್ತಿ ನಿಂತಿರುವ ಕುಮಾರ ಗಿರಿಯಲ್ಲಿ ಶ್ರೀ ಶಿಶಿಲೇಶ್ವರನ ಮೂಲಸ್ಥಾನವಿದೆ.

ಈ ಪವಿತ್ರ ಕ್ಷೇತ್ರದಲ್ಲಿ ಶ್ರೀ ಶಿಶಿಲೇಶ್ವರನನ್ನು ಆರಾಧಿಸಿದರೆ ಸರ್ವಾಭೀಷ್ಟ ಸಿದ್ಧಿಯಾಗುವುದೆಂದೂ ಮತ್ಸ್ಯ ತೀರ್ಥಗ್ರದದಲ್ಲಿ ಸ್ನಾನ ಮಾಡಿ ಮೀನುಗಳಿಗೆ ತಿನ್ನಲು ಅಕ್ಕಿಯನ್ನು ಅರ್ಪಿಸಿದರೆ ಸಕಲ ರೋಗ ಶಮನವಾಗುವುದೆಂದೂ ಲೋಕ ಪ್ರತೀತಿಯಿದೆ. ಕಪಿಲಾ ನದಿಯ ಮೀನ ಗುಂಡಿಯೆಂಬ ಮತ್ತೊಂದು ಮಡುವಿನಲ್ಲಿಯೂ ಬಹಳ ಪೆರುವೇಲು ಮೀನುಗಳಿವೆ. ಈ ವಿಶಿಷ್ಟ ಜಾತಿಯ ಮತ್ಸ್ಯಗಳನ್ನು ತಿಂದರೆ ಮಹಾವಿಪತ್ತು ಸಂಭವಿಸುವುದೆಂದು ಆಸ್ತಿಕರ ನಂಬುಗೆಯಾಗಿದೆ. ಈ ಮೀನುಗಳನ್ನು ಹಿಡಿಯಬಾರದೆಂದು ಹಿಂದಿನ ಮದ್ರಾಸು ಸರಕಾರವೂ ಈಗಿನ ಕರ್ಣಾಟಕ ಸರಕಾರವೂ ನಿಷೇಧಾಜ್ಞೆ ವಿಧಿಸಿದೆ.

ಶ್ರೀ ಶಿಶಿಲೇಶ್ವರ ದೇವಸ್ಥಾನವು ನೆರೆಹೊರೆಯ ಅನೇಕ ಗ್ರಾಮಗಳನ್ನು ಒಳಗೊಂಡ ಶಿಶಿಲ ಸೀಮೆಯ ಪ್ರಧಾನ ದೇವಾಲಯವೆಂದು ಪರಿಗಣಿಸಲಾಗುತ್ತಿದೆ. ತುಳುನಾಡಿನಲ್ಲಿ ಪ್ರಖ್ಯಾತ ಪುಣ್ಯ ತೀರ್ಥವೆನಿಸಿದ ಕಪಿಲಾ ನದಿಯ ತೀರದಲ್ಲಿ ಶ್ರೀ ಶಿಶಿಲೇಶ್ವರ ಸನ್ನಿಧಿ ಪ್ರದೇಶವು ಅತ್ಯಂತ ರಮಣೀಯವಾದ ಪುರಾತನ ಕ್ಷೇತ್ರವಾಗಿದೆ.

ಕಪಿಲಾನದಿ ಗುತ್ತಿಗ್ರಾಮದಲ್ಲಿ ಹುಟ್ಟಿ ಕೆಳಗಿಳಿದು ಭೈರವಪುರ ಗ್ರಾಮ ದಲ್ಲಿ ಸುಳಿದು ಶಿಶಿಲ ಗ್ರಾಮಕ್ಕೆ ಹರಿದು ಬರುತ್ತದೆ. ಶ್ರೀ ಶಿಶಿಲೇಶ್ವರನ ಅಭಿ ಷೇಕಕ್ಕೆ ನಿರ್ಮಲ ಜಲವನ್ನು ಒದಗಿಸುವ ಕಪಿಲಾ ನದಿ ಇಲ್ಲಿ ಪವಿತ್ರ ತೀರ್ಥ ವೆನಿಸಿದೆ ಅನಂತರ ಈ ಪಾವನ ತಟಿನಿ ಶಿಶಿಲದಿಂದ ಮುಂದೆ ಸಾಗಿ ಶಿಬಾಜೆ–ಹತ್ತಿ ಯಡ್ಕ ಕೌಕ್ರಾಡಿ – ಕೊಕ್ಕಡ – ಪಟ್ರಮೆ ಗ್ರಾಮಗಳಲ್ಲಿ ಪ್ರವಹಿಸಿ ಕೂಡಿಗೆ ಯೆಂಬಲ್ಲಿ ನೇತ್ರಾವತಿ ನದಿಯೊಡನೆ ಸಂಗಮಗೊಳ್ಳುತ್ತದೆ.
ಕಪಿಲಧಾರೆಯೆಂದು ನಾಮಾಂತರವಿರುವ ಭಾಗೀರಥಿಯಂತೆ ಕಪಿಲಾನದಿ ತನ್ನಲ್ಲಿ ಮಿಂದ ಆಸ್ತಿಕರ ಸಮಸ್ತ ಪಾಪತಾಪವನ್ನು ಪರಿಹರಿಸುವ ಪುಣ್ಯಪ್ರದವಾಹಿನಿ ಯಾಗಿದೆ.

ಮತ್ಸ್ಯತೀರ್ಥಹ್ರದ

ಈ ಶಿವಕ್ಷೇತ್ರದಲ್ಲಿ ಹರಿಯುವ ಕಪಿಲಾನದಿಯ ಮಡುವಿನಲ್ಲಿ ಬೃಹದಾ ಕೃತಿಯ ಪೆರುವೇಲು (ರಾಜೀವ) ಮೀನುಗಳು ಗುಂಪುಗೂಡಿ ವಾಸಿಸುತ್ತಿವೆ. ಅತ್ಯಂತ ಸಾಧುಸ್ವಭಾವದ ಈ ಮತ್ಸ್ಯಗಳು ಶ್ರೀ ಶಿಶಿಲೇಶ್ವರನ ಸಮೀಪದ ದಿವ್ಯಗೃಹದಲ್ಲಿ ವೈರಿ ಬಾಧೆಗೊಳಗಾಗದೆ ನಿರ್ಭೀತಿಯಿಂದ ವಿಹರಿಸಬಹುದೆಂದು ಗ್ರಹಿಸಿ ಬಂದು ನೆಲಸಿವೆ. ಇವುಗಳಿಗೆ ಶ್ರೀ ಶಿಶಿಲೇಶ್ವರನು ಆಶ್ರಯವಿತ್ತು ಸಂಕ ಷ್ಟಬಾರದಂತೆ ಅಭಯ ಪ್ರದಾನ ಮಾಡಿರುವನು. ಆದುದರಿಂದ ಈ ಮತ್ಸ್ಯಗ ಳನ್ನು ಹಿಂಸಿಸುವ ಕಟುಕರಿಗೆ ಬಹಳ ಹಾನಿಯಾಗುತ್ತದೆ. ಇವುಗಳಿಗೆ ಆಹಾರ ವನ್ನು ಅರ್ಜಿಸುವ ಭಕ್ತರಿಗೆ ಅತ್ಯಂತ ಸುಖ ಒದಗುತ್ತದೆ. ಹೀಗೆ ಕರುಣಾಕರ ನಾದ ಶಂಕರನ ಅನುಗ್ರಹದಿಂದ ಅಲ್ಪಜೀವಿಗಳಾದ ಜಲಚರಗಳು ಮಹತ್ವ ಪಡೆದು ಶ್ರೀ ಶಿಶಿಲೇಶ್ವರನ ಮತ್ಸ್ಯಗಳೆಂದು ಪ್ರಸಿದ್ಧವಾಗಿವೆ. ಈ ವಿಶಿಷ್ಟ ಜಾತಿ ಯ ಪೆರುವೇಲು ಮೀನುಗಳಿರುವ ಕಪಿಲಾ ನದಿಯ ಮಡುವಿಗೆ "ಮತ್ಸ್ಯತೀರ್ಥ ಹ್ರದ"ವೆಂಬ ಅನ್ವರ್ಥನಾಮವು ಸಾರ್ಥಕವಾಗಿ ಪ್ರಯೋಗಗೊಂಡಿದೆ.

ದಾನವ ವಧೆ

ಹಿಂದೆ ಸಹ್ಯಾದ್ರಿ ವಲಯ ಪ್ರಾಂತ್ಯವನ್ನು ವ್ಯಾಘ್ರಾಸ್ಯನೆಂಬ ಮಹಾಸುರನು ಆಳುತ್ತಿದ್ದನು. ಆ ದೈತ್ಯೇಶ್ವರನೂ ಅವನ ಅಧೀನದ ರಾಕ್ಷಸ ಸೈನಿಕರೂ ಒಮ್ಮೆ ಶಿಶಿಲ ಕ್ಷೇತ್ರವನ್ನು ಪ್ರವೇಶಿಸಿ ಕೋಲಾಹಲ ಮಾಡಿದರು. ಅವರು ಅನೇಕ ಖಗ

ಮೃಗ ಸಂಕುಲವನ್ನು ತರಿದು ಭಕ್ಷಿಸಿದರು. ಕೆಲವರು ಕಪಿಲಾನದಿಯ ಮತ್ಸ್ಯಗಳನ್ನು ಹಿಡಿಯತೊಡಗಿದರು ಆಗ ಶ್ರೀ ಶಿಶಿಲೇಶ್ವರನ ಸೂಚನೆಯಂತೆ ಕುಮಾರಾದಿಕ್ಷೇತ್ರ ರಕ್ಷಕರು ಆ ದಿತಿಜರಿಗೆ ದೂರದಿಂದ ಶರಪ್ರಯೋಗ ಮಾಡಿ ಸಂಹರಿಸಿದರು. ಈ ವಿಷಯವನ್ನು ಅರಿತು ಕ್ರುದ್ಧನಾದ ವ್ಯಾಘ್ರಾಸ್ಯನೂ ಅಳಿದುಳಿದ ಅವನ ಅನುಚರರೂ ಶ್ರೀ ಶಿಶಿಲೇಶ್ವರನ ಸನ್ನಿಧಿ ಸ್ಥಾನವನ್ನು ಆಕ್ರಮಿಸಲು ಪ್ರಯತ್ನಿಸಿದರು. ಆಗ ಅವರನ್ನು ಶೈವಭೂತಗಳು ಇದುರಿಸಲು ಘೋರ ಸಂಗ್ರಾಮವಾಯಿತು. ಅಸುರ ಸೇನೆಯನ್ನು ಭೂತಾಗ್ರೇಸರರು ಕಾದಾಡಿ ಮರ್ದಿಸಿದರು. ಪಾತಕಿಯಾದ ವ್ಯಾಘ್ರಾಸ್ಯನನ್ನು ಪರಾಕ್ರಮಿಯಾದ ಕುಮಾರನು ತನ್ನ ಖಡ್ಗದಿಂದ ಸಂಹರಿಸಿದನು. ಸಮಸ್ತದಾನವ ವಂಶವು ನಾಶವಾಯಿತು ಈ ಪ್ರದೇಶದಲ್ಲಿ ಶಾಂತಿ ನೆಲಸಿತು. ಆಗ ಶ್ರೀ ಶಿಶಿಲೇಶ್ವರನು ಸಂತುಷ್ಟನಾಗಿ ಭೂತಾಗ್ರಗಣ್ಯನಾದ ಕುಮಾರನ ಶೌರ್ಯವನ್ನು ಪ್ರಶಂಶಿಸಿ ತನ್ನ ವಾಸಸ್ಥಳವಾದ ದಿವ್ಯಾದ್ರಿಗೆ ಕುಮಾರಗಿರಿಯೆಂದು ಅಂಕಿತನಾಮವಿಟ್ಟನು. ಅಂದಿನಿಂದ ಕುಮಾರಾದಿ ಭೂತಗಣಗಳ ಆಶ್ರಯ ಸ್ಥಾನವಾದ ಭೂಧರವು ಕುಮಾರಗಿರಿಯೆಂದು ಪ್ರಸಿದ್ಧಿಗೊಂಡಿತು. ಈ ಶೈಲದ ಉಪತ್ಯಕ ಪ್ರದೇಶದಲ್ಲಿ ಕುಮಾರಾದಿ ಕ್ಷೇತ್ರ ರಕ್ಷಕರು ದನುಜರಿಗೆ ಪ್ರಯೋಗಿಸಿದ ಶಿಲೀ ಮುಖಗಳು ಶಿಲಾಕೃತಿ ತಾಳಿ ಅಲ್ಲಲ್ಲಿ ಗೋಚರಿಸುತ್ತಿವೆ. ಇವುಗಳಲ್ಲಿ ಹಿರಿದಾದ ದೈವಿಕ ಶಕ್ತಿಯಿರುವ ಪಗರಿಕಲ್ಲು (ಬಾಣೋಪಲ) ಈ ವೀರರ ಅಪ್ರತಿಮ ಸಾಹಸದ ದ್ಯೋತಕವಾಗಿ ಭೂತ ರಾಕ್ಷಸ ಯುದ್ಧದ ಸಾಕ್ಷಿರೂಪವಾಗಿ ನೆಲಕ್ಕೆ ನಾಟಿ ನಿಂತಿದೆ. ಶ್ರೀ ಶಿಶಿಲೇಶ್ವರ ಸನ್ನಿಧಿ ಪ್ರದೇಶವನ್ನು ಅಪವಿತ್ರಗೊಳಿಸಬಾರದೆಂದೂ ಮತ್ಸ್ಯತೀರ್ಥ ಹ್ರದದ ಪೆರುವೇಲು ಮೀನುಗಳನ್ನು ತಿನ್ನಲು ಬಯಸಬಾರದೆಂದೂ ಈ ಪುರಾಣ ಕಥೆಯಿಂದ ವ್ಯಕ್ತವಾಗುತ್ತದೆ.

ಶ್ರೀ ಶಿಶಿಲೇಶ್ವರ ದರ್ಶನ

ಶ್ರೀ ಶಿಶಿಲೇಶ್ವರನ ನಿವಾಸಭೂಮಿಯಾದ ಶಿಶಿಲಗ್ರಾಮವು ಗಿರಿವನ ಪಙ್ಕ್ತಿಯಿಂದ ಪರಿಶೋಭಿಸುವ ಪ್ರಶಾಂತ ದಿವ್ಯ ಕ್ಷೇತ್ರವಾಗಿದೆ. ಪರಿಶುದ್ಧ ಕಪಿಲಾನದಿ ಪ್ರವಹಿಸುವ ಈ ನದೀಮಾತೃಕ ಪ್ರದೇಶದಲ್ಲಿ ಮತ್ತೆ ಮಾನವರು ಬಂದು ನೆಲಸಿ ಸುಖ ಸಂತೋಷದಿಂದ ಜೀವಿಸಿದರು. ಇಲ್ಲಿ ಜನಸಮುದಾಯವು ವಾಸಿಸಿದ ಅನಂತರ ಒಂದು ವಿಚಿತ್ರ ಘಟನೆ ಸಂಭವಿಸಿತು.

ಗೊಂಡು ಭಕ್ತಿಭಾವದಿಂದ ಪರಮೇಶ್ವರ ಪ್ರತೀಕಕ್ಕೆ ಪ್ರದಕ್ಷಿಣೆ ಬಂದು ವಂದಿಸಿ ಸ್ತುತಿಸಿದರು. ಅನಂತರ ಊರಿನ ಧುರೀಣರು, ಬ್ರಾಹ್ಮಣೋತ್ತಮನನ್ನು ಕರೆದು ಮಾರನೆಯ ದಿನದಿಂದ ದೇವ ಪೂಜೆಯನ್ನು ನೆರವೇರಿಸಬೇಕೆಂದು ವಿಜ್ಞಾಪಿಸಿದರು. ಆ ಧಾತ್ರಿಸುರನು ತನ್ನ ಪೂರ್ವಜನ್ಮದ ಸುಕೃತ ಫಲದಿಂದ ಶಿವಾರ್ಚನೆಯ ಸುಯೋಗ ಭಾಗ್ಯವೊದಗಿತೆಂದು ಭಾವಿಸಿ ಸಮ್ಮತಿಸಿದನು. ಆಗ ಸೂರ್ಯನು ಮುಳುಗಲು ಸಂಧ್ಯಾ ಸಮಯದಲ್ಲಿ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಈ ಗ್ರಾಮದ ಮುಖಂಡರು ವಿಪ್ರನಿಗೆ ನೆಲಸಲು ಒಂದು ಉತ್ತಮ ಗೃಹವನ್ನು ಒದಗಿಸಿಕೊಟ್ಟರು.

ಆ ದಿವಸ ರಾತ್ರಿ ಕಾಲದಲ್ಲಿ ಭೂದಿವಿಜನಿಗೆ ಸ್ವಪ್ನದಲ್ಲಿ ಭೂತನಾಥನು ತನ್ನ ಪರಿವಾರ ಗಣದೊಡನೆ ಗೋಚರಿಸಿ ಕ್ಷೇತ್ರ ರಕ್ಷಕ ಭೂತಗಳ ನಿರ್ದಿಷ್ಟ ನಿವಾಸ ಸ್ಥಗಳನ್ನು ನಿರ್ದೇಶಿಸಿ ಆರಾಧಿಸಲು ಸೂಚಿಸಿದನು. ಆದುದರಿಂದ ಬ್ರಾಹ್ಮಣ ಶ್ರೇಷ್ಠನಿಗೆ ದೇವ ಪೂಜಾ ವಿಧಾನವು ಮನವರಿಕೆಯಾಯಿತು.

ಇತ್ತ ದೆಸಿಲುವೂ ಕಿಲಮರತ್ತಾಯನೂ ತಮ್ಮ ಮನಸ್ಸಿನಲ್ಲಿ ನಾನಾ ರೀತಿಯ ಸಂಶಯ ತಾಳಿ ಆಲೋಚನಾ ಮಗ್ನರಾದರು. ಈಶ್ವರ ಪ್ರತೀಕವನ್ನು ಕತ್ತಿಯಿಂದ ಹೊಡೆದುದರಿಂದ ಭಗ್ನವಾಯಿತೆಂದೂ ಅಂತ್ಯಜರಾದ ತಾವು ಮುಟ್ಟಿದುದರಿಂದ ಅಪವಿತ್ರವಾಯಿತೆಂದೂ ಆ ಮುಗ್ಧ ಶಿವಭಕ್ತರು ಭಾವಿಸಿ ಚಿಂತಿಸಿದರು. ಅಂದು ಇರುಳಿನಲ್ಲಿ ಅವರಿಗೆ ಪರಮೇಶ್ವರನು ಕನಸಿನಲ್ಲಿ ಕಾಣಿಸಿ ಅವರನ್ನು ಸಂತೈಸಿದನು. "ನೀವು ಸಿದ್ಧಾಂತಃಕರಣದ ಕಿಂಕರರಾದುದರಿಂದ ಹೀನ ಕುಲಜರಾದರೂ ಉತ್ತಮರೆನೆಸಿರುವಿರಿ. ನಿಮ್ಮಲ್ಲಿ ನನಗೆ ಅಸಮಾಧಾನವಿದೆಯೆಂದು ಭಾವಿಸದಿರಿ. ನಿಮ್ಮಿಂದ ನನ್ನ ಮಹಿಮೆ ಪ್ರಕಟವಾಯಿತು. ನನ್ನ ಸಂಕಲ್ಪದಂತೆ ಈ ವಿಚಿತ್ರ ಚರಿತ್ರೆ ಸಂಭವಿಸಿದೆ. ಈ ಘಟನೆಯ ಕುರುಹಾಗಿ ಶಿಲೆಯಲ್ಲಿ ಗಾಯವನ್ನು ಉಳಿಸಿಕೊಂಡಿರುವೆನು. ನನ್ನ ಸಾನಿಧ್ಯ ಶಿಲೆಯಿಂದ ದಶ ದಿನ ಪರ್ಯಂತ ರುಧಿರ ಸ್ರಾವವಾದುದರಿಂದ ಜನತೆಗೆ ನಿಮ್ಮ ಅಸೀಮಭಕ್ತಿ ತಿಳಿಯುವಂತೆ ಸ್ಮರಣೆಗಾಗಿ ಪ್ರತೀ ವರ್ಷವೂ ಮೇಷ ಮಾಸ ಇಪ್ಪತ್ತೆರಡನೆಯ ದಿನದಿಂದ ಹತ್ತು ದಿನಗಳವರೆಗೆ ರಾತ್ರಿ ಕಾಲದಲ್ಲಿ ನೀವು ನಿಮ್ಮ ಹಣೆಗಳನ್ನು ಗೀರಿ

ಸ್ವಲ್ಪ ರಕ್ತವನ್ನು ಅರ್ಪಿಸಿ ಪುನೀತರಾಗಿರಿ" ಎಂದು ಶಂಕರನು ನಿರೂಪಿಸಿದನು. ಆಗ ಅವರ ಶಂಕೆಗಳು ದೂರವಾಗಿ ಚಿತ್ತಕ್ಕೆ ನೆಮ್ಮದಿಯೊದಗಿತು.

ಮಾರನೆಯದಿನ ಪ್ರಭಾತಕಾಲದಲ್ಲಿ ದ್ವಿಜವರ್ಯನೂ ಗ್ರಾಮ ನಿವಾಸಿಗಳೂ ಕುಮಾರಗಿರಿಗೆ ಹೋದರು. ಪ್ರಾಜ್ಞನಾದ ಬ್ರಾಹ್ಮಣನು ಶಿವಪ್ರತೀಕಕ್ಕೆ ಶಿಶಿಲೇಶ್ವರನೆಂದು ಅಭಿದಾನವಿತ್ತು ಪೂಜಿಸಿದನು. ಸ್ವಲ್ಪ ದೂರದಲ್ಲಿ ಕುಮಾರ– ಇಷ್ಟದೇವತೆ– ಮಹಿಷಾನನ (ಮಹಿಷಂತಾಯ) ವರಾಹಮುಖಿ (ಪಂಜುರ್ಲಿ) ಭೂತಗಳಿಗೆ ಸ್ಥಾನಗಳನ್ನು ಕಲ್ಪಿಸಿ ಆರಾಧಿಸಿದರು. ಎಲ್ಲರೂ ಶಿಶಿಲೇಶ್ವರನಿಗೆ ನಮಿಸಿ ಪ್ರಸಾದ ಸ್ವೀಕರಿಸಿ ಮರಳಿದರು.

ಅರ್ಚಕನು ಶ್ರೀ ಶಿಶಿಲೇಶ್ವರನಿಗೆ ರಾತ್ರಿ ಪೂಜೆ ಮಾಡಿದ ಬಳಿಕ ದೇಸಿಲುವೂ ಕಿಲಮರತ್ತಾಯನೂ ಕುಮಾರ ಗಿರಿಯ ತಪ್ಪಲಿನಲ್ಲಿ ದೇವಾಭಿ ಮುಖವಾಗಿ ನಿಂತು ತಮ್ಮ ಹಣೆಗಳನ್ನು ಕತ್ತಿಯಿಂದ ಗೀರಿ ನೆಲಕ್ಕೆ ನೆತ್ತರನ್ನು ಬೀಳಿಸಿ ವಂದಿಸುತ್ತಿದ್ದರು. ಅನಂತರ ದೇವಲಕನು ನೀಡುವ ಗಂಧ ಪ್ರಸಾದವನ್ನು ಅವರು ತಮ್ಮ ಲಲಾಟಗಳಿಗೆ ಲೇಪಿಸಿಕೊಳ್ಳುತ್ತಿದ್ದರು. ಹೀಗೇ ಅವರು ಹತ್ತು ದಿನಗಳವರೆಗೆ ಬೋಳುವಿಧಿ ಆಚರಿಸಿದರು. ಅರ್ಚಕನು ಶ್ರೀ ಶಿಶಿಲೇಶ್ವರನಿಗೆ ಪ್ರತೀ ದಿನವೂ ತ್ರಿಕಾಲ ಪೂಜೆ ಮಾಡುತ್ತಿದ್ದನು. ಶಿಶಿಲದಲ್ಲಿ ಈಶ್ವರಾರಾಧನೆಯನ್ನು ಆರಂಭಿಸಿದ ಬಳಿಕ ಸಮಸ್ತ ಜನತೆಗೂ ಕ್ಷೇಮಾಭಿವೃದ್ಧಿ ಸಂತೋಷ ಫಲಗಳು ಪ್ರಾಪ್ತಿಯಾದುವು.

ಶ್ರೀ ಶಿಶಿಲೇಶ್ವರ ದೇವಾಲಯ

ಶ್ರೀ ಶಿಶಿಲೇಶ್ವರನ ಮೂಲಸ್ಥಾನವಾದ ಕಮಾರಗಿರಿಗೆ ಅರ್ಚಕನು ಕಪಿಲಾ ನದಿಯಲ್ಲಿ ಸ್ನಾನ ಮಾಡಿ ದೇವ ಪೂಜೆಗೆ ಹೋಗುತ್ತಿದ್ದನು. ಮಳೆಗಾಲದಲ್ಲಿ ಒಂದು ದಿವಸ ಅವನು ಹೊಳೆಯಲ್ಲಿ ಮಿಂದು ಕೊಡದಲ್ಲಿ ನೀರನ್ನು ತುಂಬಿಸಿ ಹೊತ್ತುಕೊಂಡು ಬೆಟ್ಟದ ಮೇಲೇರುವಾಗ ಬಣ್ಪು ಮರದ ಸೊಪ್ಪನ್ನು ಮೆಟ್ಟಿ ಕಾಲು ಜಾರಿ ಬಿದ್ದನು. ಆಗ ಅವನು ನೋವನ್ನು ಸಹಿಸಲಾರದೆ "ಈ ಊರಿನಲ್ಲಿ ಇನ್ನು ಮುಂದೆ ಬಣ್ಪು ಮರವು ಹುಟ್ಟದಿರಲಿ" ಎಂದು ಶಪಿಸಿ

ಮೆಲ್ಲನೆ ಗುಡ್ಡವನ್ನು ಹತ್ತಿದನು. "ಶ್ರೀ ಶಿಶಿಲೇಶ್ವರನು ಹೊಳೆಯ ಬಳಿಯಲ್ಲಿಯೇ ಉದ್ಭವಿಸುತ್ತಿದ್ದರೆ ಪೂಜಿಸಲು ಅನುಕೂಲವಾಗುತ್ತಿತ್ತು" ಎಂದು ಅವನು ಎಣಿಸುತ್ತಾ ಶ್ರೀ ಶಿಶಿಲೇಶ್ವರ ಪ್ರತೀಕವಿರುವ ಸ್ಥಳಕ್ಕೆ ಬಂದನು ಅನಂತರ ಎಂದಿನಂತೆ ಶಿವ ಪೂಜೆಯನ್ನು ನೆರವೇರಿಸಿ ಕುಮಾರ ಗಿರಿಯಿಂದ ಕೆಳಗಿಳಿದು ತನ್ನ ಮನೆಗೆ ಮರಳಿದನು. ಆ ದಿವಸ ರಾತ್ರಿ ಕಾಲದಲ್ಲಿ ಅರ್ಚಕನಿಗೆ ಶ್ರೀ ಶಿಶಿಲೇಶ್ವರನು ಸ್ವಪ್ನದಲ್ಲಿ ಗೋಚರಿಸಿ ತಾನು ಕಪಿಲಾ ನದೀ ತೀರದಲ್ಲಿಯೇ ಆವಿರ್ಭವಿಸುವೆನೆಂದೂ ಅಲ್ಲಿಯೇ ಪ್ರತೀದಿನವೂ ಪೂಜಿಸಿದರೆ ಸಂತೃಪ್ತನಾಗುವೆನೆಂದೂ ಅನುಗ್ರಹಿಸಿದನು. ಮಾರನೆಯದಿನ ಕಪಿಲಾ ನದಿ ತಟದಲ್ಲಿ ಅರ್ಚಕನಿಗೆ ಕುಮಾರ ಗಿರಿಯ ಈಶ್ವರ ಪ್ರತೀಕದಂತೆ ಶಿರದಲ್ಲಿ ಗಾಯವಿರುವ ನವೀನ ಶಿವಲಿಂಗವು ಕಂಡಿತು. ಇದನ್ನು ನೋಡಿ ಬಹಳ ವಿಸ್ಮಯ ತಾಳಿ ಅವನು ಅಲ್ಲಿಂದ ಕುಮಾರ ಗಿರಿಗೆ ತೆರಳಿ ಪರೀಕ್ಷಿಸಿದನು ಆ ಬೆಟ್ಟದ ತುದಿಯಲ್ಲಿದ್ದ ಶ್ರೀ ಶಿಶಿಲೇಶ್ವರ ಪ್ರತೀಕವು ಮಾಯವಾಗಿ ಶಿಲಾತಳದಲ್ಲಿ ಶಿವಪಾದ ಚಿಹ್ನೆಗಳು ಮೂಡಿದ್ದುವು. ಅರ್ಚಕನು ಅಲ್ಲಿಂದ ಕೆಳಗಿಳಿದು ಬಂದು ಊರಿನ ಜನಕ್ಕೆ ಈ ವಿಚಾರವನ್ನು ವಿವರಿಸಿದನು. ಗ್ರಾಮ ನಿವಾಸಿಗಳು ಕಪಿಲ ನದಿ ತಟದ ಶ್ರೀ ಶಿಶಿಲೇಶ್ವರ ಲಿಂಗವನ್ನು ಕಂಡು ಅತ್ಯಂತ ಭಕ್ತಿ ಶ್ರದ್ಧೆಯಿಂದ ವಂದಿಸಿ ಶಿವ ಮಹಿಮೆಯನ್ನು ಕೊಂಡಾಡಿ ಸ್ತುತಿಸಿದರು.

ಅಂದಿನಿಂದ ಅರ್ಚಕನು ಕಪಿಲಾನದೀ ತೀರದ ಶಿವಲಿಂಗವನ್ನು ಪೂಜಿಸಲು ಪ್ರಾರಂಭಿಸಿದನು. ಅನಂತರ ಇಲ್ಲಿ ಶ್ರೀ ಶಿಶಿಲೇಶ್ವರ ದೇವಾಲಯವನ್ನೂ ಮಹಾಗಣಪತಿ ಮಂದಿರವನ್ನೂ ನಿರ್ಮಿಸಲಾಯಿತು.

ಇತರ ಕ್ಷೇತ್ರ ದೇವತೆಗಳು

ಈ ದಿವ್ಯ ಶಿವ ಕ್ಷೇತ್ರದಲ್ಲಿ ಮಹಾಕಾಳಿ ತನ್ನ ಪರಿವಾರ ದೇವತೆಗಳೊಂದಿಗೆ ಕ್ಷೇತ್ರರಕ್ಷಕಿಯಾಗಿ ನೆಲಸಿದಳು. ಶಿವಾಲಯದ ಪರಿಸರದಲ್ಲಿ ಕೊಡಮಣಿತ್ತಾಯ ಪಿಲಿ ಚಾಮುಂಡಿ – ಪಂಜುರ್ಲಿ ಇತ್ಯಾದಿ ಭೂತಗಳೂ ಬಹಿರ್ವಲಯದಲ್ಲಿ ಶಿರಾಡಿ ಭೂತ – ಬಚ್ಚನಾಯಕ – ನಾಗಬ್ರಹ್ಮ – ಗಿಳಿರಾಮ –

ಕಲ್ಕುಡ ಮುಂತಾದ ದೈವಗಳೂ ಆಗಮಿಸಿ ನೆಲೆಗೊಂಡುವು. ಈ ಭೂತಗಣಗಳು ದೇವಲಕನಿಗೆ ಸ್ವಪ್ನದಲ್ಲಿ ಕಾಣಿಸಿ ತಮ್ಮನ್ನು ಆರಾಧಿಸಬೇಕೆಂದು ನಿರೂಪಿಸಲು ಅರ್ಚಕನ ಸೂಚನೆಯಂತೆ ಈ ದೈವ ಶಕ್ತಿಗಳಿಗೆ ಬೇರೆ ಬೇರೆ ಗುಡಿಗಳನ್ನು ರಚಿಸಲಾಯಿತು. ಇಲ್ಲಿಂದ ಸ್ವಲ್ಪ ದೂರದ ಕೂಡುಕಲ್ಲು ಮಜಲಿನಲ್ಲಿ ಅಲ್ಲಿಯ ಸ್ಥಳ ನಿವಾಸಿಗೆ ಸ್ವಪ್ನದಲ್ಲಿ ದೇವೀಸಾನಿಧ್ಯವು ಗೋಚರಿಸಲು ಅಲ್ಲಿ ದುರ್ಗಾ ದೇವಾಲಯವನ್ನು ವಿರಚಿಸಲಾಯಿತು.

ಮೇತಿ ಮತ್ತು ಕಿಲಮರತ್ತಾಯ ಭೂತಗಳು

ಶ್ರೀ ಶಿಶಿಲೇಶ್ವರನ ಪರಮ ಭಕ್ತರಾದ ದೆಸಿಲು ಮೇತಿಯೂ ಕಿಲಮರತ್ತಾಯನೂ ಕುಮಾರ ಗಿರಿಯ ತಪ್ಪಲಿನಲ್ಲಿ ನೆಲಸಿ ಅನೇಕ ವರ್ಷಗಳವರೆಗೆ ಸಂತೋಷದಿಂದ ಬಾಳಿದರು. ಕೊನೆಗೆ ಅವರಿಗೆ ವೃದ್ಧಾಪ್ಯವೊದಗಲು ಶರೀರದ ಚೈತನ್ಯವು ಕ್ಷೀಣಿಸಿತು. ಆದರೂ ಅವರು ಪ್ರತಿ ವರ್ಷದಂತೆ ಹತ್ತು ದಿವಸದ ಬೋಳುವಿಧಿ ಆಚರಿಸಿದರು. ಮೇಷ ಮಾಸ ಮೂವತ್ತೊಂಬನೆಯ ದಿನ (ವೃಷಭ ಸಂಕ್ರಮಣದ ದಿವಸ) ರಾತ್ರಿ ಕಾಲದಲ್ಲಿ ಹತ್ತನೆಯ ದಿನದ ಬೋಳು ನೆರವೇರಿಸಿ ಶ್ರೀ ಶಿಶಿಲೇಶ್ವರ ಪ್ರಸಾದವನ್ನು ಸ್ವೀಕರಿಸಿ ಶಿವಸ್ಮರಣೆ ಮಾಡುತ್ತಾ ನೆಲದಲ್ಲಿ ಪವಡಿಸಿದರು. ಮತ್ತೆ ಅವರು ಮೇಲೇಳಲಿಲ್ಲ. ಏಕಕಾಲದಲ್ಲಿ ಇಬ್ಬರೂ ನಿಧನ ಹೊಂದಿದರು. ಆಗ ಶ್ರೀ ಶಿಶಿಲೇಶ್ವರನು ಭೂಲೋಕದಲ್ಲಿ ತನ್ನ ಕುರುಹನ್ನು ತೋರಿಸಿದ ಆ ಅಂತ್ಯಜರನ್ನು ಪುಣ್ಯಾತ್ಮರೆಂದು ಪರಿಗಣಿಸಿ ತನ್ನ ಪರಿವಾರದ ಭೂತಗಳಾಗುವಂತೆ ಅನುಗ್ರಹಿಸಿದನು.

ಆ ಶೈವ ಭೂತಗಳು ದೆಸಿಲುವಿನ ಸಂತತಿಯ ಮೇತಿಯೊಬ್ಬಳ ಮೆಯ್ಯಲ್ಲಿಯೂ ಮೇರನೊಬ್ಬನ ಶರೀರದಲ್ಲಿಯೂ ಸೇರಿ ಆವೇಶತಾಳಿ ನುಡಿವಂತೆ ಪ್ರಚೋದಿಸಲು ದೈವಾವಿಷ್ಟರು ಮೇತಿ ಮತ್ತು ಕಿಲಮರತ್ತಾಯ ಭೂತಗಳನ್ನು ಆರಾಧಿಸಬೇಕೆಂದು ಸೂಚಿಸಿದರು.

ಅದರಂತೆ ಆ ದೈವಗಳಿಗೆ ಕುಮಾರ ಗಿರಿಯ ತಪ್ಪಲಿನಲ್ಲಿ ಸಾನಿಧ್ಯ ಸ್ಥಾನ ಗಳನ್ನು ನಿರ್ಮಿಸಲಾಯಿತು. ಅನಂತರ ದೆಸಿಲುವಿನ ಎಂಟು ಮಂದಿ ಪುತ್ರ ಪುತ್ರಿಯರೂ ಶ್ರೀ ಶಿಶಿಲೇಶ್ವರನ ಸಮ್ಮುಖದಲ್ಲಿ ಪ್ರತೀ ವರ್ಷವೂ ಹತ್ತು ದಿನಗಳ ಬೋಳುವಿಧಿ ಆಚರಿಸಿದರು. ಅವರು ತಮ್ಮ ಅವಸಾನದ ಬಳಿಕ ಮೋತಿ ದೈವದ ಬಳಗಕ್ಕೆ ಸೇರಿದರು. ಆದುದರಿಂದ ಪರಿವಾರ ಸಮೇತ ಮೋತಿ ದೈವವನ್ನೂ ಕಿಲಮರತ್ತಾಯ ಭೂತವನ್ನೂ ಆರಾಧಿಸುವ ರೂಢಿ ಪ್ರಾರಂಭವಾಯಿತು.

ಶಿಶಿಲದಲ್ಲಿ ಶ್ರೀ ಶಿಶಿಲೇಶ್ವರನೂ ಅನೇಕ ಪರಿವಾರ ದೇವತೆಗಳೂ ಅಸಂಖ್ಯಾತ ಭೂತಗಳೂ ನೆಲಸಿದುದರಿಂದ ಈ ಪ್ರದೇಶವು ಅಸದೃಶವಾದ ಪವಿತ್ರ ಶಿವಕ್ಷೇತ್ರವಾಗಿ ಮೆರೆಯುತ್ತಿದೆ.

ಶ್ರೀ ಶಿಶಿಲೇಶ್ವರ ಪ್ರತೀಕವನ್ನು ಆದಿಯಲ್ಲಿ ಗುರುತಿಸಿದ ದೆಸಿಲುವಿನ ಸ್ಮರಣಾರ್ಥವಾಗಿ ಈ ಊರಿಗೆ ತುಳುವರು "ದೆಸಿಲ್" ಎಂಬ ಬೇರೊಂದು ಹೆಸರನ್ನು ಇಟ್ಟಿರಂತೆ !

ಕಪಿಲಾಶಿಲೆ – ವ್ಯಾಘ್ರಶಿಲೆ

ಶ್ರೀ ಶಿಶಿಲೇಶ್ವರ ದೇವಾಲಯದ ಸಮೀಪದಲ್ಲಿ ಪ್ರವಹಿಸುವ ಕಪಿಲಾ ನದಿಯ ಮತ್ಸ್ಯ ತೀರ್ಥಹ್ರದದಲ್ಲಿ ಎರಡು ಬಂಡೆಗಲ್ಲುಗಳು ಎದ್ದು ನಿಂತಿವೆ. ಈ ಅಚಲವಾದ ವಿಶಿಷ್ಟ ಶಿಲಾ ಪ್ರತೀಕಗಳು ಶ್ರೀ ಶಿಶಿಲೇಶ್ವರನ ಮಹಿಮೆಯನ್ನೂ ಕಪಿಲಾ ನದಿಯ ಪಾವಿತ್ರ್ಯವನ್ನೂ ಪ್ರಕಟಪಡಿಸುತ್ತವೆ.

ಪೂರ್ವ ಕಾಲದಲ್ಲಿ ಒಮ್ಮೆ ಕಪಿಲೆಯೆಂಬ ಧೇನು ಕುಮಾರಗಿರಿಯ ಉಪತ್ಯಕ ಪ್ರದೇಶದಲ್ಲಿ ಸಂಚರಿಸುತ್ತಿರಲು ಒಂದು ಮಹಾ ವ್ಯಾಘ್ರವು ಕಾಂತಾರದಿಂದ ಬಂದು ಅದನ್ನು ಬೆಂಬತ್ತತೊಡಗಿತು. ಆಗ ಆ ಸುರಭಿ ಭೀತಿಗೊಂಡು ಥಟ್ಟನೆ ಕಪಿಲಾ ನದಿಗೆ ಇಳಿಯಲು ಬೆನ್ನಟ್ಟುತ್ತಾ ಬಂದ ದುಷ್ಟ ದ್ವೀಪಿಯೂ ಹೊಳೆಗೆ ಧುಮುಕಿತು.ಆದರೆ ಶ್ರೀ ಶಿಶಿಲೇಶ್ವರನ ಮಾಯಾ ಶಕ್ತಿಯಿಂದ ಅದಕ್ಕೆ

ಮುಂದುವರಿಯಲು ಸಾಧ್ಯವಾಗದೆ ನಿಂತು ಬಿಟ್ಟಿತು. ಕಪಿಲಾ ನದಿಯ ಪವಿತ್ರ ಸಲಿಲಸ್ಪರ್ಶದಿಂದ ಘೋರತರಕ್ಷು ಪರಿಶುದ್ಧಿಗೊಂಡು ಹಿಂದೆ ಮುಖ ತಿರುಗಿಸಿ ಎಡಕ್ಕೆ ನೋಡಲು ತೀರದಲ್ಲಿ ಶ್ರೀ ಶಿಶಿಲೇಶ್ವರ ಲಿಂಗವು ಕಂಡಿತು. ಆ ಕ್ಷಣದಲ್ಲಿಯೇ ಹೆಬ್ಬುಲಿಯ ಕ್ರೂರ ಸ್ವಭಾವವು ಮಾಯವಾಗಿ ಗೋವನ್ನು ಹಿಂಸಿಸುವುದು ಪಾಪಕೃತ್ಯವೆಂಬ ಸಂಜ್ಞಾನವು ಅದರ ಮನಸ್ಸಿನಲ್ಲಿ ಹೊಳೆಯಿತು ಆಗ ಕಪಿಲೆ ತನ್ನನ್ನು ಹಿಂಬಾಲಿಸಿದ ವ್ಯಾಘ್ರವು ಸ್ತಬ್ಧವಾಗಿ ನಿಂತುದನ್ನು ಅರಿತು ಆಶ್ಚರ್ಯದಿಂದ ಹಿಂದೆ ತಿರುಗಿ ನೋಡಲು ಅದಕ್ಕೆ ಶ್ರೀ ಶಿಶಿಲೇಶ್ವರ ಪ್ರತೀಕದ ದರ್ಶನವಾಯಿತು. ಈ ಶಿವ ಕ್ಷೇತ್ರದ ಮಹತ್ವವನ್ನು ಕಪಿಲೆ ತಿಳಿದು ಗೋಸ್ವರೂಪದ ಶಿಲೆಯಾಗಿ ಅಲ್ಲಿಯೇ ನಿಲ್ಲಬೇಕೆಂದು ಸಂಕಲ್ಪಿಸಲು ಹುಲಿಯೂ ಅದರ ಸಮೀಪದಲ್ಲಿಯೇ ಶಿಲೆಯಾಗಿ ಇರಬೇಕೆಂದು ಅಪೇಕ್ಷಿಸಲು ಶ್ರೀ ಶಿಶಿಲೇಶ್ವರನ ಮಹಿಮಾ ಪ್ರಭಾವದಿಂದ ಅವು ಕಪಿಲಾ ನದಿಯಲ್ಲಿ ಎರಡು ದಿವ್ಯಾಶ್ಮಗಳಾಗಿ ರೂಪುಗೊಂಡುವು. ಆದುದರಿಂದ ಇವುಗಳಿಗೆ ಕಪಿಲೆ ಕಲ್ಲು (ಕಪಿಲಾ ಶಿಲೆ) ಹುಲಿ ಕಲ್ಲು (ವ್ಯಾಘ್ರ ಶಿಲೆ) ಗಳೆಂಬ ನಾಮಧೇಯಂಗಳಾದುವು. ಶ್ರೀ ಶಿಶಿಲೇಶ್ವರ ಸನ್ನಿಧಿ ಪ್ರದೇಶಕ್ಕೆ ಆಗಮಿಸುವ ದುಷ್ಟಜೀವಿಗಳು ಶಿಷ್ಟಜೀವಿಗಳಾಗಿ ಪರಿವರ್ತನೆಗೊಂಡು ತಮ್ಮೊಳಗಿನ ವೈರ ಭಾವವನ್ನು ಮರೆತು ಪರಸ್ಪರ ಮೈತ್ರಿಯಿಂದ ಬಾಳುವುವೆಂದು ಜಗತ್ತಿಗೆ ಸಾರುವಂತೆ ಈ ಎರಡು ಮಹಾ ಶಿಲಾ ಪ್ರತೀಕಗಳು ಕಪಿಲಾ ನದಿಯಲ್ಲಿ ಸ್ಥಿರವಾಗಿ ನಿಂತಿವೆ. //

ಶ್ರೀ ಶಿಶಿಲೇಶ್ವರನ ಮತ್ಸ್ಯಗಳ ಅಪಹಾರ

ಶ್ರೀ ಶಿಶಿಲೇಶ್ವರ ದೇವಸ್ಥಾನದಿಂದ ಸುಮಾರು ಹದಿನೈದು ಕಿಲೋಮೀಟರ್ ದೂರದಲ್ಲಿ ಶಿಶಿಲ ಸೀಮೆಗೆ ಸೇರಿದ ಕೊಕ್ಕಡದಲ್ಲಿ ಶ್ರೀ ವೈದ್ಯನಾಥೇಶ್ವರನ ದಿವ್ಯ ದೇವಾಲಯವು ರಮಣೀಯವಾಗಿ ರಂಜಿಸುತ್ತಿದೆ. ಇದರ ಪರಿಸರದಲ್ಲಿ ಶಿವ ಪರಿವಾರ ದೇವತೆಗಳ ಮಂದಿರಗಳೂ ಶ್ರೀ ವಿಷ್ಣು ಮೂರ್ತಿಯ ದೇವಾಯತನವೂ ಪರಿಶೋಭಿಸುತ್ತಿವೆ. ಈ ಶಿವಾಲಯದ ಸಮೀಪದಲ್ಲಿ

ರುವ ಸರೋವರದ ಮಧ್ಯದಲ್ಲಿ ಶ್ರೀ ನೀಲಕಂಠೇಶ್ವರನ ಭವ್ಯ ನಿಲಯವು ವಿರಾಜಿಸುತ್ತಿದೆ. ಈ ಮಹಾ ತಟಾಕದಲ್ಲಿ ಮಡೆಂಜಿ (ಮದ್ಗುರ) ಎಂಬ ವಿಶಿಷ್ಟ ಜಾತಿಯ ಮೀನುಗಳು ನೆಲೆಗೊಂಡಿವೆ. ಇವುಗಳ ಸೃಷ್ಟಿಯು ಕುರಿತು ಒಂದು ವಿಶಿಷ್ಟ ಕತೆ ಪ್ರಚಾರದಲ್ಲಿದೆ.

ಹಿಂದೆ ಕೊಕ್ಕಡದ ಮುಖಂಡರು ಶಿಶಿಲದ ಕಪಿಲಾ ನದಿಯಿಂದ ಕೆಲವು ಪೆರುವೇಲು ಮೀನುಗಳನ್ನು ತಂದು ಕೊಕ್ಕಡದ ಕೆರೆಯಲ್ಲಿ ಸಾಕಬೇಕೆಂದು ಯೋಚಿಸಿದರು. ಅದಕ್ಕಾಗಿ ಕೆಲವು ಸಾಹಸಿಗಳು ಶಿಶಿಲಕ್ಕೆ ಬಂದು ಮತ್ಸ್ಯ ತೀರ್ಥಹೃದದ ಪೆರುವೇಲು ಮೀನುಗಳನ್ನು ಹಿಡಿಯ ತೊಡಗಿದರು. ಆಗ ಶಿಶಿಲದ ಧುರೀಣರು ಶ್ರೀ ಶಿಶಿಲೇಶ್ವರನ ಮತ್ಸ್ಯಗಳನ್ನು ತೆಗೆದು ಕೊಂಡು ಹೋಗಬಾರದೆಂದು ಆಕ್ಷೇಪಿಸಿ ತಡೆದರು. ಸ್ವಾಭಾವಿಕವಾಗಿ ಹರಿಯುವ ಹೊಳೆ ಯಿಂದ ಮೀನುಗಳನ್ನು ಹಿಡಿದರೆ ಯಾರಿಗೂ ವಿಚಾರಿಸುವ ಅಧಿಕಾರವಿಲ್ಲವೆಂದು ಕೊಕ್ಕಡದ ಪರಾಕ್ರಮಿಗಳು ವಾದಿಸಿ ಮತ್ಸ್ಯಗಳನ್ನು ಹಿಡಿದರು. ಆಗ ಶಿಶಿಲದ ವೀರರು ರೋಷಗೊಂಡು ಅವರನ್ನು ತಡೆಯಲು ಈ ತಂಡದ ಶೂರರಿಗೂ ವಿವಾದ ಬೆಳೆದು ಕಲಹವಾಯಿತು. ಕೊನೆಗೆ ಶಿಶಿಲದ ಆಸ್ತಿಕ ವಿಕ್ರಮಿಗಳು ಕೊಕ್ಕ ಡದ ವ್ಯಕ್ತಿಗಳು ಬೆನ್ನಟ್ಟಿದರು. ಆದರೆ ಕೊಕ್ಕಡದ ಕೆಲವು ಧೀರರು ತಮ್ಮ ಕೈಗೆ ಸಿಕ್ಕಿದ ಮತ್ಸ್ಯಗಳನ್ನು ಉಪಾಯದಿಂದ ಕಾಣದಂತೆ ತೆಗೆದುಕೊಂಡು ಹೋಗಿ ಕೊಕ್ಕಡದ ಪುಷ್ಕರಿಣಿಯಲ್ಲಿ ಬಿಟ್ಟರು.

ಆಗ ಶ್ರೀ ಶಿಶಿಲೇಶ್ವರನು ತನ್ನ ಮತ್ಸ್ಯಗಳನ್ನು ಕೊಕ್ಕಡದ ಧುರೀಣರು ವಂಚಿಸಿ ಅಪಹರಿಸಿಕೊಂಡು ಹೋದುದರಿಂದ ಅಸಮಾಧಾನಗೊಂಡು ಮುನಿದನು. ಕಪಿಲಾನದಿಯ ಮತ್ಸ್ಯ ತೀರ್ಥಹೃದದಿಂದ ಭವಿಷ್ಯತ್ಕಾಲದಲ್ಲಿ ಯಾರೂ ಮೀನು ಗಳನ್ನು ಕೊಂಡಯ್ಯಬಾರದೆಂದು ಜನತೆಗೆ ತಿಳುಹುವ ಉದ್ದೇಶದಿಂದ ಶ್ರೀ ಶಿಶಿಲೇಶ್ವರನು" ಕೊಕ್ಕಡದ ತಟಾಕದಲ್ಲಿ ಪೆರುವೇಲುಗಳು ಅನ್ಯಜಾತಿಯ ಮಡೆಂಜಿ ಮೀನುಗಳಾಗಲಿ" ಎಂದು ಶಪಿಸಿದನು. ಅದರಂತೆ ಆ ಸರೊವರದಲ್ಲಿ ಪೆರುವೇಲು ಮೀನುಗಳು ಮಡೆಂಜಿ ಮೀನುಗಳಾಗಿ ಪರಿವರ್ತನೆಗೊಂಡುವು. ಹೀಗೆ ಕೊಕ್ಕಡದ ಜನತೆ ಬಹಳ ಪರಿಶ್ರಮದಿಂದ ಶ್ರೀ ಶಿಶಿಲೇಶ್ವರನ ಮತ್ಸ್ಯಗ ಳನ್ನು ಅಪಹರಿಸಿದರೂ ಅವರ ಇಷ್ಟಾರ್ಥವು ನೆರವೇರಲಿಲ್ಲ. ಆದುದರಿಂದ ಈ

ಪಾವನ ಮತ್ಸ್ಯಗಳನ್ನು ಬೇರೆ ಕಡೆಗೆ ಒಯ್ಯಬಾರದೆಂದೂ ಅವುಗಳನ್ನು ಹಿಂಸಿಸಬಾರದೆಂದೂ ಶ್ರೀ ಶಿಶಿಲೇಶ್ವರನ ಸಂಕಲ್ಪವೆಂದು ಸ್ಪಷ್ಟವಾಗುತ್ತದೆ.

ಶಿಶಿಲದ ಪ್ರಧಾನ ದೇವತಾ ಮಂದಿರಗಳು

ಸುಪವಿತ್ರ ಕಪಿಲಾ ನದಿಯ ತೀರದಲ್ಲಿ ನಿರ್ಮಿತವಾದ ಶ್ರೀ ಶಿಶಿಲೇಶ್ವರ ದೇವಾಲಯವು ಚಿತ್ತಾಕರ್ಷಕವಾಗಿ ವಿಭ್ರಾಜಿಸುತ್ತಿದೆ. ಇದರ ಸಮೀಪದಲ್ಲಿ ನೈಋತ್ಯ ಭಾಗದಲ್ಲಿ ಸುಂದರವಾದ ಮಹಾ ಗಣಪತಿ ದೇವನಿಕೇತವೂ ವಿರಾಜಿಸುತ್ತಿದೆ. ಆಗ್ನೇಯ ದಿಕ್ಕಿನಲ್ಲಿ ಕೊಡಮಣಿತ್ತಾಯ – ಪಿಲಿ – ಚಾಮುಂಡಿ ಇತ್ಯಾದಿ ಭೂತಗಳ ಆಶ್ರಯ ಸ್ಥಾನವಿದೆ. ಈ ಶಿವಾಲಯದ ಬಹಿರ್ವಲಯದಲ್ಲಿ ಮಹಾಕಾಳಿಯ ದಿವ್ಯಾಗಾರವೂ ಶಿರಾಡಿ ಭೂತ – ಬಚ್ಚನಾಯಕ – ನಾಗಬ್ರಹ್ಮ – ಗಿಳಿರಾಮ ಮುಂತಾದ ದೈವಗಳ ಭೂತಾಲಯವೂ ಶೋಭಿಸುತ್ತಿವೆ. ಇವುಗಳ ಸಮೀಪದಲ್ಲಿ ಒಂದು ಅಶ್ವತ್ಥ ವೃಕ್ಷವೂ ವಿಶಾಲವಾದ ನಾಗವನವೂ ಚೆನ್ನಾಗಿ ಬೆಳೆದು ಕಣ್ಗೊಳಿಸುತ್ತಿವೆ. ರಥವೀಧಿಯಲ್ಲಿ ಬೋಳಿನ ಕಳವೂ ಕೆಲವು ಭೂತಗಳ ಸನ್ನಿಧಿ ಸ್ಥಳಗಳೂ ಗೋಚರಿಸುತ್ತಿವೆ. ಸ್ವಲ್ಪ ದೂರದಲ್ಲಿ ಕಿಲಮರತ್ತಾಯ ದೈವದ ಗುಡಿಯಿದೆ.

ಉನ್ನತವಾದ ಕುಮಾರ ಗಿರಿಯ ಶಿಕರದಲ್ಲಿ ಶ್ರೀ ಶಿಶಿಲೇಶ್ವರನ ಚರಣ ಚಿಹ್ನೆಗಳಿರುವ ದಿವ್ಯ ಶಿಲಾ ತಳವು ರಂಜಿಸುತ್ತಿದೆ. ಇಲ್ಲಿ ಕುಮಾರ – ಮಹಿಷಂತಾಯ– ಇಷ್ಟದೇವತೆ – ಪಂಜುರ್ಲಿದೈವಗಳ ಸನ್ನಿಧಿ ಸ್ಥಾನಗಳಿವೆ. ಇಲ್ಲಿಂದ ಒಂದು ಕಿಲೋಮೀಟರ್ ದೂರದ ಕಾವಿನ ಕಾನದಲ್ಲಿ ವನದೇವತೆಯ ನಿವಾಸ ಸ್ಥಾನವಿದೆ ಕೋಡಿ (ಕೊಡ್ಯ) ಪಾದೆಎಂಬಲ್ಲಿ ಚಾಮುಂಡಿಯ ಸಾನಿಧ್ಯ ಶಿಲಾ ಸಂಕೇತವಿದೆ. ಇಲ್ಲಿಂದ ಸ್ವಲ್ಪದೂರದ ಕೂಡುಕಲ್ಲು ಮಜಲಿನಲ್ಲಿ ದುರ್ಗಾ ದೇವಾಲಯವು ರಾಜಿಸುತ್ತಿದೆ.

ಶಿಶಿಲದ ನಾನಾ ಪ್ರದೇಶಗಳಲ್ಲಿ ಅನೇಕ ಭೂತ ಸ್ಥಾನಗಳೂ ನಾಗವನಗಳೂ ಪರಿಶೋಭಿಸುತ್ತಿವೆ. ಪ್ರಾಚೀನವಾದ ಶ್ರೀ ಶಿಶಿಲೇಶ್ವರ ದೇವಾಲಯವು ಶಿಶಿಲದ ಅರಸರ ಆಳಿಕೆಯ ಕಾಲದಲ್ಲಿ ಶಿಲಾಮಯವಾಗಿ ನಿರ್ಮಾಣಗೊಂಡಿತು.

ಇತರ ಕ್ಷೇತ್ರಗಳು

ಶಿಶಿಲದಿಂದ ನಾಲ್ಕು ಕಿಲೋಮೀಟರ್ ದೂರದಲ್ಲಿ ಶಿಬಾಜೆ ಗ್ರಾಮದ ಮೊಂಟೆತಡ್ಕ ಎಂಬ ಪ್ರಶಾಂತ ಪ್ರದೇಶದಲ್ಲಿ ಸುಪ್ರಸಿದ್ಧ ವನದುರ್ಗಾ ದೇವಾಲಯವು ರಮಣೀಯವಾಗಿ ಕಣ್ಗೊಳಿಸುತ್ತಿದೆ. ಇಲ್ಲಿಂದ ಸ್ವಲ್ಪ ದೂರದ ಅಮ್ಮಾಜೆಯೆಂಬಲ್ಲಿ ಇನ್ನೊಂದು ದುರ್ಗಾ ಮಂದಿರವು ವಿರಾಜಿಸುತ್ತಿದೆ. ಶಿಶಿಲದಿಂದ ಆರು ಕಿಲೋಮೀಟರ್ ದೂರದ ಶಿರಾಡಿ ಗ್ರಾಮದಲ್ಲಿ ಶಿರಾಡಿಭೂತ–ಬಚ್ಚನಾಯಕ ಮುಂತಾದ ದೈವಗಳ ಮೂಲ ಸ್ಥಾನವೆಂದು ಪ್ರಖ್ಯಾತಿಗೊಂಡ ಭೂತಾಲಯವೂ ಮನೋಹರವಾದ ಸುಬ್ರಹ್ಮಣ್ಯ ದೇವಸ್ಥಾನವೂ ಸಂಶೋಭಿಸುತ್ತಿವೆ. ಶಿಶಿಲದಿಂದ ಆರು ಕಿಲೋಮೀಟರ್ ದೂರದ ಹತ್ಯಡ್ಕ ಗ್ರಾಮದ ಬೂಡುಮುಗೇರು ಎಂಬಲ್ಲಿ ದುರ್ಗಾದೇವಾಲಯವು ಪರಿಶೋಭಿಸುತ್ತಿದೆ. ಇವು ಶ್ರೀ ಶಿಶಿಲೇಶ್ವರ ದೇವಸ್ಥಾನಕ್ಕೆ ಸಂಬಂಧಿಸಿದ ಪ್ರಧಾನ ಕ್ಷೇತ್ರಗಳಾಗಿವೆ.

ಹಿಂದೆ ಶಿಶಿಲದ ಜೈನಮತದ ಅರಸರ ಕಾಲದಲ್ಲಿ ನಿರ್ಮಾಣ ಗೊಂಡಿದ್ದ ಈಗ ಭಗ್ನವಾಗಿರುವ ಕಗ್ಗಲ್ಲಿನ ಹಲವು ಬಸದಿಗಳ ಅವಶೇಷಗಳು ಶಿಶಿಲ ಸೀಮೆಯ ವಿವಿಧ ಸ್ಥಳಗಳಲ್ಲಿ ಗೋಚರಿಸುತ್ತಿವೆ.

ಶ್ರೀ ಶಿಶಿಲೇಶ್ವರ ದೇವಾಲಯದ ಪೂಜಾ ಪದ್ಧತಿ

ಶ್ರೀ ಶಿಶಿಲೇಶ್ವರ ಮತ್ತು ಮಹಾ ಗಣಪತಿ ದೇವರಿಗೆ ಪ್ರತೀ ದಿವಸದಲ್ಲಿಯೂ ತ್ರಿಕಾಲ ಪೂಜೆಯಾಗುವುದು. ಆಶ್ವಯುಜ ಅಮಾವಾಸ್ಯೆಯ ದೀಪಾವಳಿಯ ದಿವಸದಿಂದ ವೃಷಭ ಮಾಸದ ಹತ್ತನೆಯ ದಿನದವರೆಗೆ ಶ್ರೀ ಶಿಶಿಲೇಶ್ವರ ಮೂರ್ತಿಯ ನಿತ್ಯಬಲಿ ಉತ್ಸವವು ನೆರವೇರುವುದು. ಈ ನಿತ್ಯ ಪೂಜಾ ವಿಧಿಗಳಲ್ಲದೆ ವಿವಿಧ ಪರ್ವದಿನಗಳಲ್ಲಿ ವಿಶೇಷ ಪೂಜೋತ್ಸವಗಳು ಶಾಸ್ತ್ರೋಕ್ತ ಪದ್ಧತಿಯಂತೆ ಜರಗುವುವು.

ಸೌರಯುಗಾದಿಯಾದ ಮೇಷ ಮಾಸದ ಪ್ರಥಮ ದಿವಸದಲ್ಲಿ ನೂತನ ಸಂವತ್ಸರದ ಪಂಚಾಂಗ ಪಠನ ಕಾರ್ಯವಾದ ಅನಂತರ ಮಹಾ ಗಣಪತಿ ಮತ್ತು ಶ್ರೀ ಶಿಶಿಲೇಶ್ವರ ದೇವರಿಗೆ ಮಹಾ ಪೂಜೆಯಾಗುವುದು.

ಶ್ರಾವಣ ಮಾಸ ಶುಕ್ಲ ಪಕ್ಷದ ನಾಗಪಂಚಮಿ ದಿವಸ ಪೂರ್ವಾಹ್ನದಲ್ಲಿ ದೇವಾಲಯದ ಪೂರ್ವದಿಕ್ಕಿನಲ್ಲಿರುವ ನಾಗವನದಲ್ಲಿ ವಿಶೇಷ ನಾಗಾರಾಧನೆ ಯಾಗುವುದು.

ಭಾದ್ರಪದ ಮಾಸದ ಶುಕ್ಲ ಪಕ್ಷದ ಗಣೇಶ ಚತುರ್ಥಿ ದಿವಸ ಪೂರ್ವಾಹ್ನ ದಲ್ಲಿ ಗಣಪತಿ ಹೋಮವೂ ಮಧ್ಯಾಹ್ನದಲ್ಲಿ ಮಹಾ ಗಣಪತಿ ಮತ್ತು ಶ್ರೀ ಶಿಶಿ ಲೇಶ್ವರ ದೇವರಿಗೆ ಮಹಾ ಪೂಜೆಗಳೂ ಜರಗುವುವು.

ಆಶ್ವಯುಜ ಮಾಸ ದೀಪಾವಳಿ ಅಮವಾಸ್ಯೆಯ ದಿವಸ ರಾತ್ರಿಕಾಲದಲ್ಲಿ ಬಲೀಂದ್ರ ಪೂಜೆಯಾದ ಅನಂತರ ಶ್ರೀ ಶಿಶಿಲೇಶ್ವರ ಮೂರ್ತಿಯ ನಿತ್ಯಬಲಿ ಉತ್ಸವವು ಪ್ರಾರಂಭವಾಗುವುದು.

ಕಾರ್ತಿಕ ಮಾಸದ ಪೌರ್ಣಮಿ ದಿವಸ ರಾತ್ರಿ ಕಾಲದಲ್ಲಿ ಶ್ರೀ ಶಿಶಿಲೇಶ್ವರ ನಿಗೂ ಮಹಾ ಗಣಪತಿಗೂ ಮಹಾ ರಂಗಪೂಜೆಯಾಗುವುದು. ಕಾರ್ತಿಕ ಮಾಸದ ಅಮಾವಾಸ್ಯೆಯ ದಿವಸ ರಾತ್ರಿ ಕಾಲದಲ್ಲಿ ಲಕ್ಷ ದೀಪೋತ್ಸವವು ಜರಗುವುದು. ಮಾಘ ಮಾಸ ಕೃಷ್ಣ ಪಕ್ಷ ಚತುರ್ದಶಿಯ ಮಹಾ ಶಿವರಾತ್ರಿ ದಿವಸ ರಾತ್ರಿ ಕಾಲ ದಲ್ಲಿ ಶಿವರಾತ್ರಿ ಮಹೋತ್ಸವವೂ ಮಾರನೆಯ ದಿವಸ ಪೂರ್ವಾಹ್ನ ಸಮಯ ದಲ್ಲಿ ಶ್ರೀ ಶಿಶಿಲೇಶ್ವರನ ದರ್ಶನಬಲಿ ಉತ್ಸವವೂ ಸಂಭ್ರಮದಿಂದ ಜರಗುವುವು. ಚಾಂದ್ರ ಯುಗಾದಿಯಾದ ಚೈತ್ರ ಮಾಸ ಶುಕ್ಲ ಪಕ್ಷ ಪಾಡ್ಯದ ದಿವಸ ಪೂರ್ವಾಹ್ನ ಕಾಲದಲ್ಲಿ ಭಜಕರಿಂದ ದೇವ ಭಜನಾ ಕಾರ್ಯವೂ ಶ್ರೀ ಶಿಶಿಲೇಶ್ವರನಿಗೆ ವಿಶೇಷ ಮಹಾ ಪೂಜೆಯೂ ನೆರವೇರುವುವು.

ಚೈತ್ರ ಮಾಸದ ಪ್ರಥಮ ಸೋಮವಾರ ದಿವಸ ಮಧ್ಯಾಹ್ನ ಕಾಲದಲ್ಲಿ ಶ್ರೀ ಶಿಶಿಲೇಶ್ವರನಿಗೆ ಶತರುದ್ರಾಭಿಷೇಕ ಸಹಿತ ಮಹಾ ಪೂಜೆಯಾಗುವುದು.

ಈ ನಿಶ್ಚಿತ ಪೂಜಾ ಕಾರ್ಯಗಳಲ್ಲದೆ ಆಗಾಗ ಭಕ್ತರಿಂದ ವಿವಿಧ ರೀತಿಯ ದೇವಾರ್ಚನಾ ಸೇವೆಗಳೂ ಜರಗುವುವು.

ಮಹೋತ್ಸವ ವಿಧಾನ

ಮೇಷ ಮಾಸ ಹದಿನೆಂಟನೆಯ ದಿವಸ ಪೂರ್ವಾಹ್ನ ಕಾಲದಲ್ಲಿ ಉತ್ಸವಕ್ಕಾಗಿ ಬಾಳೆಗೊನೆ ಕಡಿವ ಕದಳೀ ಮುಹೂರ್ತ ವಿಧಿ ಜರಗುವುದು. ಮೇಷ ಮಾಸ ಇಪ್ಪತ್ತೆರಡನೆಯ ದಿವಸ ಸಾಯಂಕಾಲದಲ್ಲಿ ಮಹಾಕಾಳಿ ಪೂಜೆಯಾದ ಅನಂತರ ತೇರ ಬೀದಿಯ ಬೋಳಿನಕಳದಲ್ಲಿ ಬೋಳುವಿಧಿ ಪ್ರಾರಂಭವಾಗುವುದು.

[ಹಿಂದೆ ಬಿಲ್ಲವ ಜಾತಿಯ ಎರಡು ಕುಟುಂಬಗಳ ನಿರ್ದಿಷ್ಟ ವ್ಯಕ್ತಿಗಳಿಂದ ಮೂರು ದಿವಸ ಪಯ್ಯೊಳಿ ಎಂಬ ವಿಶಿಷ್ಟ ಯೋಧ ನೃತ್ಯವು ನೆರವೇರುತ್ತಿತ್ತು. ಪ್ರಾಚೀನ ಕಾಲದಲ್ಲಿ ಶಿವ ಪರಿವಾರ ದೇವತೆಗಳು ರಾಕ್ಷಸರನ್ನು ಯುದ್ಧದಲ್ಲಿ ಸಂಹರಿಸಿದ ಚರಿತ್ರೆಯನ್ನು ಪ್ರದರ್ಶಿಸುವಂತೆ ಈ ವಿಶಿಷ್ಟ ನರ್ತನವು ಆಚರಣೆಗೆ ಬಂದಿರ ಬಹುದು.]

ಬೋಳು ವಿಧಿ

ಮೇಷ ಮಾಸ ಇಪ್ಪತ್ತೆರಡನೆಯ ದಿವಸದಿಂದ ಮೇಷ ಮಾಸ ಮುವತ್ತರ ವರೆಗೆ ರಾತ್ರಿ ಕಾಲದಲ್ಲಿ ಮಹಾಕಾಳಿ ಪೂಜೆಯಾದ ಅನಂತರ ತೇರ ಬೀದಿಯ ಬೋಳಿನ ಕಳದಲ್ಲಿ ಮೇರ ಜಾತಿಯ ಮೂರು ಗಂಡಸರೂ ಭೂತ ನೃತ್ಯ ಮಾಡುವ ನಲಿಕ್ಕೆ ಜಾತಿಯ ಎರಡು ಗಂಡಸರೂ ಗೌಡ ಜಾತಿಯ ದೈವಗಳ ಪೂಜಾರಿಯೂ ಸೇರಿ ಬೋಳು ವಿಧಿಯನ್ನು ನೆರವೇರಿಸುವರು.

ಹಿಂದೆ ಶ್ರೀ ಶಿಶಿಲೇಶ್ವರ ಪ್ರತೀಕಕ್ಕೆ ದೆಸಿಲು ಮೇತಿಯೂ ಕಿಲಮರತ್ತಾಯನೂ ಕತ್ತಿಯಿಂದ ತಿವಿದ ಅಪರಾಧದ ಪ್ರಾಯಶ್ಚಿತ್ತಕ್ಕಾಗಿ ವಿಧಿಸಿಕೊಂಡ ಶಿಕ್ಷೆಯನ್ನು ಅನುಸರಿಸಿ ಆ ವಂಶದ ಒಬ್ಬ ಮೇರನಿಗೂ ಇಬ್ಬರು ದೈವಪಾತ್ರಿಗಳಿಗೂ ಬೋಳು ವಿಧಿಯಾಗುವುದು. ಬೋಳಿನ ಕಳದಲ್ಲಿ ಒಂಬತ್ತು ಮೇತಿ

ಮೊಗಗಳನ್ನು ದೈವದ ಪೂಜಾರಿ ತಂದಿಡುವನು. ವ್ರತ ನಿಷ್ಠರಾದ ಕಿಲಯ ಮೇರನ ಮತ್ತು ಇಬ್ಬರು ದೈವಪಾತ್ರಿಗಳ ಹಣೆಗೆ ಒಬ್ಬ ಮೇರನು ಖಡ್ಗದಿಂದ ತಿವಿದು ನೆಲಕ್ಕೆ ನೆತ್ತರನ್ನು ಬೀಳಿಸುವನು. ಅನಂತರ ದೈವಗಳ ಪೂಜಾರಿ ನೀಡುವ ಶ್ರೀ ಶಿಶಿಲೇಶ್ವರನ ಗಂಧ ಪ್ರಸಾದವನ್ನು ಕಿಲಯ ಮೇರನೂ ದೈವಪಾತ್ರಿಗಳೂ ಹಣೆಗೆ ಲೇಪಿಸಿಕೊಳ್ಳುವರು. ಹೀಗೆ ಒಂಬತ್ತು ದಿನಗಳವರೆಗೆ ಈ ಬೋಳು ವಿಧಿ ಜರಗುವುದು ಒಂಬತ್ತನೆಯ ದಿವಸ ಕಿಲಮರತ್ತಾಯ ಭೂತದ ಕೋಲವು ನಡೆದು ಕೊನೆಗೆ ಈ ದೈವ ಪಾತ್ರಿಯ ಬೋಳು ನೆರವೇರುವುದು. ಹೀಗೆ ನವ ದಿವಸ ಪರ್ಯಂತದ ಬೋಳು ವಿಧಿ ಮುಗಿದ ಅನಂತರ ಶ್ರೀ ಶಿಶಿಲೇಶ್ವರ ದೇವಾಲಯದಲ್ಲಿ ಮಹೋತ್ಸವವು ಪ್ರಾರಂಭವಾಗುವುದು.

ಉತ್ಸವದ ಒಂಭತ್ತು ದಿವಸಗಳ ಕಾರ್ಯಕ್ರಮ ವಿವರ

ಮೊದಲ ದಿನ ಮೇಷ ಮೂವತ್ತರಂದು ರಾತ್ರಿಕಾಲದಲ್ಲಿ ಕಾವಿನ ಕಾನದಲ್ಲಿ ವನದೇವತೆಯ ಆರಾಧನೆಯಾದ ಅನಂತರ ಶ್ರೀ ಶಿಶಿಲೇಶ್ವರ ದೇವಸ್ಥಾನದಲ್ಲಿ ಧ್ವಜಾರೋಹಣವಾಗುವುದು. ಈ ಸಮಯದಲ್ಲಿ ಸಮಸ್ತ ದೈವಗಳ ಅರ್ಚನೆಯೂ ನಡೆಯುವುದು. ಅನಂತರ ಶ್ರೀ ಶಿಶಿಲೇಶ್ವರನಿಗೆ ವಿಶೇಷ ಮಹಾ ಪೂಜೆಯಾಗುವುದು.

ಎರಡನೆಯ ದಿನ ಹೆಚ್ಚಾಗಿ ವೃಷಭ ಸಂಕ್ರಮಣವು ಬರುತ್ತದೆ. ಕಪಿಲಾ ನದಿ ಆವಿಷ್ಕರಿಸಿದ ಈ ಪವಿತ್ರ ದಿವಸದಲ್ಲಿ ಭಕ್ತರು ಮತ್ಸ್ಯ ತೀರ್ಥಹ್ರದಲ್ಲಿ ವಿಶೇಷ ತೀರ್ಥಸ್ನಾನ ಮಾಡುವ ಸಂಪ್ರದಾಯವಿದೆ. [ಮೇಷ ಮಾಸ ಮೂವತ್ತ ರಂದು ವೃಷಭ ಸಂಕ್ರಾಂತಿ ಬಂದರೆ ಮೊದಲ ದಿನ ತೀರ್ಥಸ್ನಾನ ಮಾಡಲಾಗು ವುದು.] ಈ ಎರಡನೆಯ ದಿವಸ ರಾತ್ರಿ ಕಾಲದಲ್ಲಿ ಮಹಾಕಾಳಿ ಪೂಜೆಯ ಅನಂತರ ಕಿಲಮರತ್ತಾಯ ಕೋಲ, ಮೇತಿ ಕೋಲಗಳು ನಡೆಯುವುವು. ಈ ಭೂತ ನೃತ್ಯ ಮಾಡುವ ಇಬ್ಬರು ದೈವಪಾತ್ರಿಗಳಿಗೂ ವಿಶೇಷ ಬೋಳುವಿಧಿ ನೆರವೇರುವುದು. ಮತ್ತೆ ದೇವಸ್ಥಾನದ ಸಮಸ್ತದೈವಗಳ ಅರ್ಚನೆಯೂ ಕೋಡಿ

ಪಾದೆಯ ಚಾಮುಂಡಿಯ ಆರಾಧನೆಯೂ ಜರಗುವುವು. ಹಿಂದೆ ಪಾರ್ತಿಕೋತ್ಸವಕ್ಕೆ ಅಪಾರ ವಸ್ತುಗಳನ್ನು ಅಶ್ವಗಳ ಮೇಲೆ ಹೇರಿ ತರುತ್ತಿದ್ದುದರಿಂದ ಅದರ ನೆನಪಿಗಾಗಿ ದೇವಾಲಯದ ಸಮ್ಮುಖದಲ್ಲಿ ಕುದುರೆ ಮುಖ ದೈವದ ಕೋಲವಾಗುವುದು ಅನಂತರ ಉಗ್ರಾಣದಲ್ಲಿ ಸಾಮಗ್ರಿಯನ್ನು ತುಂಬಿಸಲಾಗುವುದು. ಬಳಿಕ ಶ್ರೀ ಶಿಶಿಲೇಶ್ವರ ಮೂರ್ತಿಯ ಮಹೋತ್ಸವ ಬಲಿ ಪ್ರಾರಂಭವಾಗಿ ಅಶ್ವತ್ಥ ಕಟ್ಟೆಯಲ್ಲಿ ಉತ್ಸವಪೂಜೆ ಜರಗುವುದು.

ಮೂರನೆಯ ದಿನ ಪೂರ್ವಾಹ್ನದಲ್ಲಿ ಮಹೋತ್ಸವ ಬಲಿಯೂ ರಾತ್ರಿ ಕಾಲದಲ್ಲಿ ಹೊಸ ಕಟ್ಟೆಯಲ್ಲಿ ಉತ್ಸವ ಪೂಜೆಯೂ ನೆರವೇರುವುವು.

ನಾಲ್ಕನೆಯ ದಿನ ಪೂರ್ವಾಹ್ನದಲ್ಲಿ ಮಹೋತ್ಸವ ಬಲಿಯೂ ರಾತ್ರಿ ಕಾಲದಲ್ಲಿ ಸವಾರಿಮಂಟಪದಲ್ಲಿ ಉತ್ಸವ ಪೂಜೆಯೂ ಜರಗುವುವು.
ಐದನೆಯದಿನ ಪೂರ್ವಾಹ್ನದಲ್ಲಿ ಶ್ರೀ ಶಿಶಿಲೇಶ್ವರನ ದರ್ಶನ ಬಲಿ ಉತ್ಸವವೂ ರಾತ್ರಿಕಾಲದಲ್ಲಿ ಬಂಗರಕಟ್ಟೆಯಲ್ಲಿ ಉತ್ಸವ ಪೂಜೆಯೂ ನೆರವೇರುವುವು.

ಆರನೆಯ ದಿನ ಪೂರ್ವಾಹ್ನದಲ್ಲಿ ಮಹೋತ್ಸವ ಬಲಿಯೂ ರಾತ್ರಿ ಕಾಲದಲ್ಲಿ ರಥವೀಥಿಯಲ್ಲಿ ಮಹಾರಥೋತ್ಸವವೂ ಬಹಳ ವಿಜೃಂಭಣೆಯಿಂದ ಜರಗುವುವು. ಆಗ ಕುಮಾರ – ಕೊಡಮಣಿತ್ತಾಯ ಭೂತಗಳ ಆಕರ್ಷಣೀಯ ನೃತ್ಯವು ನಡೆಯುವುದು. ರಥೋತ್ಸವದ ಬಳಿಕ ಭೂತಬಲಿ ದೇವಶಯನಾದಿ ವಿಶೇಷ ವಿಧಿಗಳು ನೆರವೇರುವುವು.

ಏಳನೆಯ ದಿನ ಪೂರ್ವಾಹ್ನದಲ್ಲಿ ದೇವಾಲಯದ ಕವಾಟೋದ್ಘಾಟನೆಯ ಅನಂತರ ವಿಶೇಷ ಮಹಾಪೂಜೆ ಸಂಭ್ರಮದಿಂದ ಜರಗುವುದು. ಸಂಧ್ಯಾಕಾಲದಲ್ಲಿ ಕಪಿಲಾ ನದಿಯ ಮತ್ಸ್ಯ ತೀರ್ಥಹ್ರದದಲ್ಲಿ ಶ್ರೀ ಶಿಸಿಲೇಶ್ವರನ ನೌಕಾ ವಿಹಾರವು ದೋಣಿಯ ಮೇಲೆ ಕಪಿಲಾ ಶಿಲೆಗೆ ಸುತ್ತು ಬಳಸುವಂತೆ ಸಾಗುವುದು. ಬಳಿಕ ಕಟ್ಟೆಯಲ್ಲಿ ದೇವಪೂಜೆಯಾಗಿ ಮೀನ ಗುಂಡಿಗೆ ಪ್ರಯಾಣೋತ್ಸವವು ಪ್ರಾರಂಭವಾಗುವುದು. ಆಗ ಮುಂದಿನಿಂದ ಶಿರಾಡಿಭೂತ – ಬಚ್ಚನಾಯಕ ದೈವಗಳು ನರ್ತಿಸುತ್ತಾ ತೆರಳುವುವು. ಕಪಿಲಾನದಿಯ ಮೀನ ಗುಂಡಿ (ಮೀನ

ಹ್ರದ) ಯೆಂಬ ಮಡುವಿನಲ್ಲಿ ಶ್ರೀ ಶಿಶಿಲೇಶ್ವರನ ಅವಭೃತ ಸ್ನಾನವು ಜರಗಿ ಕಟ್ಟೆಯಲ್ಲಿ ಮಹಾ ಪೂಜೆಯಾಗುವುದು ಮತ್ತೆ ದೇವಸ್ಥಾನಕ್ಕೆ ಮರಳಿ ಬಂದ ಅನಂತರ ಧ್ವಜಾವರೋಹಣವಾಗುವುದು.

ಎಂಟನೆಯ ದಿನ ಪೂರ್ವಾಹ್ನದಲ್ಲಿ ಶ್ರೀ ಶಿಶಿಲೇಶ್ವರನ ಮೂಲಸ್ಥಾನವಾದ ಕುಮಾರಗಿರಿಯಲ್ಲಿ ಶಿವಪಾದ ಚಿಹ್ನಸ್ಥಾನಕ್ಕೆ ವಿಶೇಷ ಮಹಾಪೂಜೆಯಾಗುವುದು. ಅಲ್ಲಿ ಕುಮಾರಭೂತ – ಇಷ್ಟದೇವತೆ – ಮಹಿಷಂತಾಯ – ಪಂಜುರ್ಲಿ ದೈವಗಳ ಕೋಲವೂ ಜರಗುವುದು. ರಾತ್ರಿಕಾಲದಲ್ಲಿ ದೇವಸ್ಥಾನದ ಸಮ್ಮುಖದಲ್ಲಿ ಕೊಡಮಣಿತ್ತಾಯ – ಪಿಲಿಚಾಮುಂಡಿ – ಪೊಟ್ಟ ಇತ್ಯಾದಿ ಭೂತಗಳ ಕೋಲವೂ ತೇರಬೀದಿಯಲ್ಲಿ ನಾಗಬ್ರಹ್ಮ – ಗಿಳಿರಾಮ – ಶಿರಾಡಿ ಭೂತ – ವಿಳ್ವೆರುಭೂತ – ಕಲ್ಕುಡ – ಬಚ್ಚನಾಯಕ – ಕೊರಗ ಮುಂತಾದ ದೈವಗಳ ಕೋಲವೂ ನೆರವೇರುವುವು.

ಒಂಬತ್ತನೆಯ ದಿನ ಪೂರ್ವಾಹ್ನದಲ್ಲಿ ದೇವಾಲಯದ ಪರಿಶುದ್ಧಿಗಾಗಿ ಶುದ್ಧಕಲಶ ಸಂಪ್ರೋಕ್ಷಣ ವಿಧಿಯಾಗಿ ಅನಂತರ ಮಧ್ಯಾಹ್ನ ಸಮಯದಲ್ಲಿ ಮಹಾಪೂಜೆಯಾಗುವುದು.

* * *

ವೃಷಭ ಮಾಸ ಹತ್ತನೆಯ ದಿವಸ ರಾತ್ರಿ ಕಾಲದಲ್ಲಿ ಮಹಾ ರಂಗಪೂಜೆ ಜರಗಿ ನಿತ್ಯಬಲಿ ಉತ್ಸವವು ಸಮಾಪ್ತಿಯಾಗುವುದು.

* * * * *

ಹೀಗೆ ಶಿಶಿಲ ಸೀಮೆಯ ಪ್ರಧಾನ ದೇವಾಲಯವೆನಿಸಿದ ಶ್ರೀ ಶಿಶಿಲೇಶ್ವರ ದೇವಸ್ಥಾನದಲ್ಲಿ ಶಾಸ್ತ್ರೋಕ್ತ ವಿಧಿಯಂತೆ ನಿತ್ಯಪೂಜಾ ಮಹೋತ್ಸವಗಳು ಜರಗುತ್ತವೆ.

* * * * *

ದಿವ್ಯ ಮಹಿಮಾಸ್ಪದವಾದ ಕಪಿಲಾ ತೀರದಲ್ಲಿರುವ ಶ್ರೀ ಶಿಶಿಲೇಶ್ವರ ಸನ್ನಿಧಿ ಪ್ರದೇಶವು ಜಾಹ್ನವೀ ತಟದಲ್ಲಿರುವ ಶ್ರೀ ವಿಶ್ವನಾಥ ನಿವಾಸ ಭೂಮಿಯಾದ ವಿಶ್ವವಿಖ್ಯಾತ ಕಾಶಿಯಂತೆ ಪವಿತ್ರಶಿವಕ್ಷೇತ್ರವೆಂದು ಪರಿಗಣಿಸಬಹುದು

—o—

ಜಯಲೋಕ ತ್ರಯಾಧೀಶ ।
ಜಯಭೂತ ಗಣೇಶ್ವರ ॥

ಜಯಶೈಲ ಕುಮಾರೀಶ ।
ಜಯಶ್ರೀ ಶಿಶಿಲೇಶ್ವರ

ಶ್ರೀ ಶಿಶಿಲೇಶ್ವರ ದೇವಾಲಯದ ಪೂಜೋತ್ಸವ ಕಾರ್ಯವನ್ನು ನೆರವೇರಿಸುವ ವ್ಯಕ್ತಿಗಳ ವಿವರ

೧. ಇಬ್ಬರು ಅರ್ಚಕರು
೨. ದೇವಾಲಯದ ತಂತ್ರಿಗಳು
೩. ಶ್ರೀ ಶಿಶಿಲೇಶ್ವರ ಮೂರ್ತಿಯನ್ನು ಹೊರುವ ದೇವಪಾತ್ರಿಗಳು
೪. ತಂತ್ರಿಗಳ ಪಾಲಿಕೆತಟ್ಟೆ ಹಿಡಿವ ಪರಿಕರ್ಮಿಗಳು
೫. ಇಬ್ಬರು ಛತ್ರಧಾರಿಗಳು
೬. ಇಬ್ಬರು ಚಾಮರಧಾರಿಗಳು
೭. ವೇದಪಾಠಕರು
೮. ಇಬ್ಬರು ಪಾಠಾಳಿಗಳು
೯. ಇಬ್ಬರು ಪದಾರ್ಥಿಗಳು
೧೦. ಧ್ವಜಧಾರಿಗಳು
೧೧. ವಾದ್ಯವಾದಕರು
೧೨. ಗಾಯಕರು
೧೩. ಆಚಾರಿಗಳು
೧೪. ಮಡಿವಳರು
೧೫. ಕ್ಷೌರಿಕರು
೧೬. ಗೌಡ ಜಾತಿಯ ಇಬ್ಬರು ದೈವಗಳ ಪೂಜಾರಿಗಳು
೧೭. ಮಲೆಕುಡಿಯರು
೧೮. ಇಬ್ಬರು ಬಿಲ್ಲವ ಜಾತಿಯ ಮುಖ್ಯಸ್ಥರು
೧೯. ಇಬ್ಬರು ಪರವರು
೨೦. ಮೂವರು ಮೇರರು
೨೧. ಇಬ್ಬರು ನಲಿಕೆಯವರು
೨೨. ಇತರ ಸಹಾಯಕರು

—o—

ದೇವಸ್ಥಾನದ ಕಾರ್ಯಗಳಿಗೆ ಸಹಕರಿಸುವ ಮುಖಂಡ ವರ್ಗದ ಪರಿಚಯ

೧. ಕರ್ನಾಟಕ ಸರಕಾರದ ಧಾರ್ಮಿಕ ಖಾತೆಯಿಂದ ನಿಯುಕ್ತರಾದ ಧರ್ಮದರ್ಶಿಗಳು

೨. ಅಡ್ಡಹಳ್ಳ ಹೆಬ್ಬಾರರು

೩. ಶಿಶಿಲ ಪರಾರಿ ಮನೆಯವರು

೪. ಶಿಶಿಲ ಗುತ್ತು ಮನೆಯವರು

೫. ಪರಪ್ಪು ಗುತ್ತು ಮನೆಯವರು

೬. ಊರಿನ ನಾನಾ ಜಾತಿಯ ಮುಖ್ಯಸ್ಥರು

೭. ಸ್ಥಳೀಯ ಸಂಸ್ಥೆಗಳ ಧುರೀಣರು

೮. ಸರಕಾರದ ವಿವಿಧ ಅಧಿಕಾರಿಗಳು

ಶಿಶಿಲದ ಇತಿಹಾಸ

— ೧ —

ಶಿಶಿಲ ಗ್ರಾಮವು ಬೆಳತಂಗಡಿ ತಾಲೂಕಿಗೆ ಸೇರಿದ ಮಲೆನಾಡಿನ ಹಳ್ಳಿಯಾಗಿದೆ. ಸಹ್ಯಾದ್ರಿಯ ಮಡಿಲಲ್ಲಿ ವಿಸ್ತರಿಸಿರುವ ಶಿಶಿಲಕ್ಕೆ ಹಿಂದೆ ಸಂಸ್ಕೃತ ಭಾಷೆಯಲ್ಲಿ ಶ್ರೀ ಶೈಲವೆಂಬ ನಾಮಧೇಯವಿತ್ತೆಂದು ಊಹಿಸಬಹುದು. ಈ ಪ್ರದೇಶದ ಮೂರು ದಿಕ್ಕುಗಳಲ್ಲಿ ಅಮೆದಿಕಲ್ಲು-ಆನೆಕಲ್ಲು-ರಕ್ಕಸಕಲ್ಲು-ಎತ್ತಿನ ಹಿಣಿಲು ಮುಂತಾದ ಗಿರಿಶೃಂಗಗಳಿಂದ ಕಣ್ಗೊಳಿಸುವ ಪರ್ವತಶ್ರೇಣಿ ಪ್ರಾಕಾರದಂತೆ ಬಳಸಿ ವ್ಯಾಪಿಸಿದೆ. ಶಿಶಿಲಕ್ಕೆ ಸಂಬಂಧಿಸಿದ ಸುರಕ್ಷಿತಾರಣ್ಯದಲ್ಲಿ ಕಾಂಜನಕೆರೆಗುಡ್ಡೆ–ಮಣ್ಣುತಗ್ಗಿದಗುಡ್ಡೆ-ಕಲ್ಲಾರುಗುಡ್ಡೆ-ಶಿಂಗಾಣಿಗುಡ್ಡೆ- ಕಾಟಿಗುಡ್ಡೆ– ಹುಲಿಮಲೆಬೆಟ್ಟ–ಸಂತವೀರಗುಡ್ಡೆ –ಪಂಜಾಲಗುಡ್ಡೆ– ಪಿಲಿಚಾಮುಂಡಿಗುಡ್ಡೆ– ಮಲ್ಲಾರುಗುಡ್ಡೆ–ಬೆಳ್ಕಲ್ಲುಗುಡ್ಡೆ–ಕುಮಾರಗುಡ್ಡೆ–ಬದಿಗುಡ್ಡೆ–ಮುಂತಾದ ಬೆಟ್ಟಗಳು ಅಲ್ಲಲ್ಲಿ ತಲೆಯೆತ್ತಿ ನಿಂತಿವೆ. ಆದುದರಿಂದ ಪೂರ್ವಕಾಲದ ವಿದ್ವಾಂಸರು ಪ್ರಾಕೃತಿಕ ಲಕ್ಷಣವನ್ನು ಪರಿಭಾವಿಸಿ ಈ ಶೈಲಪ್ರಾಂತ್ಯಕ್ಕೆ "ಶ್ರೀಶೈಲ" ವೆಂಬ ಅನ್ವರ್ಥನಾಮವನ್ನು ಪ್ರಯೋಗಿಸಿರಬಹುದು. ಹಿಂದೆ ಮೂಲನಿವಾಸಿಗಳು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಿದ್ದ ಅನೇಕ ಸ್ಥಳಗಳನ್ನು ಒಂದುಗೂಡಿಸಿ ಮತ್ತೆ ಗ್ರಾಮವಾಗಿ ಪರಿಗಣಿಸುವ ಸಮಯದಲ್ಲಿ ಸಂಸ್ಕೃತ ಭಾಷಾಕೋವಿದರು ಶ್ರೀ ಶೈಲವೆಂಬ ವಿಶಿಷ್ಟ ನಾಮಧೇಯವನ್ನು ಇಟ್ಟಿರಬಹುದು. ಹೀಗೆಯೇ ತುಳು ನಾಡಿನಲ್ಲಿ ತುಳು ಮಾತ್ರವಲ್ಲದೆ ಕನ್ನಡ –ಸಂಸ್ಕೃತ ಭಾಷೆಗಳ ಸ್ಥಳನಾಮಗಳು ಪ್ರಚಾರದಲ್ಲಿವೆ. [ಸ್ವರ್ಗ–ಪಾತಾಳ ಇತ್ಯಾದಿ ಸ್ಥಳನಾಮಗಳಿವೆ] ಶ್ರೀಶೈಲದ ಅಪಭ್ರಂಶ ರೂಪವಾಗಿ ಈ ಊರಿಗೆ ಕನ್ನಡ ತುಳುಭಾಷೆಗಳಲ್ಲಿ ಶಿಶಿಲ(ಸಿಸಿಲ)ವೆಂಬ ಹೆಸರು ಮತ್ತೆ ಬಳಕೆಗೊಂಡಿರಬಹುದು. ಈಗ ವ್ಯವಹಾರದಲ್ಲಿ ಇರುವಂತೆ ಇನ್ನು ಶಿಸಿಲವೆಂದೇ ಬರೆಯುವುದು ವಿಹಿತವಾಗಿದೆ. ಶ್ರೀ ಶೈಲಪ್ರದೇಶದಲ್ಲಿ ಆರಾಧನೆಗೊಂಡ ಈಶ್ವರನಿಗೆ ಹಿಂದೆ ಶ್ರೀಶೈಲೇಶ್ವರನೆಂಬ ಅಂಕಿತ ನಾಮವನ್ನು ಪೂರ್ವಿಕರು ಇಟ್ಟಿರಬಹುದು. ಈ ಶಿವಾಭಿಧಾನವು ಮತ್ತೆ ಶಿಶಿಲೇಶ್ವರನೆಂದು ವ್ಯತ್ಯಾಸಗೊಂಡು ಪ್ರಸಿದ್ಧಿ ಪಡೆದಿರಬಹುದು.

ತುಳುವಿನಲ್ಲಿ ಈ ಊರನ್ನು "ದೆಸಿಲ್" ಎಂದು ಹೇಳುವ ರೂಢಿ ಇದೆ. ಶ್ರೀ ಶಿಶಿಲೇಶ್ವರ ಪ್ರತೀಕವನ್ನು ಪ್ರಾಚೀನ ಕಾಲದಲ್ಲಿ ಗುರುತಿಸಿದ ದೆಸಿಲುವಿನ ಹೆಸರನ್ನೇ ಈ ಪ್ರದೇಶಕ್ಕೆ ಇಡಲಾಯಿತೆಂದು ಜನತೆಯು ಪರಂಪರಾಗತವಾದ ಒಂದು ಹೇಳಿಕೆ ಸಾರುತ್ತದೆ. ಆದರೆ ತುಳುವಿನ ದೆಸಿಲ್ ಕನ್ನಡದಲ್ಲಿ ಶಿಶಿಲ ವೆಂದು ವ್ಯತ್ಯಾಸವಾಗದು. ಕನ್ನಡದ ಶಿಶಿಲವು ತುಳುವಿನಲ್ಲಿ ದೆಸಿಲ್ ಎಂದು ರೂಪಾಂತರ ತಾಳದು. ಈ ಗ್ರಾಮದ ಸಮೀಪದಲ್ಲಿರುವ "ದೇವರ ಮನೆ" ಯೆಂಬ ಊರಿಗೂ "ದೇವರ ಬೆಟ್ಟ" ಎಂಬ ಗುಡ್ಡೆಗೂ "ದೇವರ ಗುಂಡಿ" ಎಂಬ ಹೊಳೆಯ ಮಡುವಿಗೂ ಆ ಹೆಸರುಗಳನ್ನೇ ವ್ಯತ್ಯಾಸ ಮಾಡದೆ ಅಭಿನ್ನವಾಗಿ ಎರಡು ಭಾಷೆಗಳಲ್ಲಿಯೂ ಬಳಸಲಾಗುತ್ತದೆ. ಶಿಶಿಲದ ನೆರೆಹೊರೆಯಲ್ಲಿರುವ ಶಿಬಾಜೆ – ಶಿರಾಡಿ – ಸಿರಿಬಾಗಿಲು – ಗ್ರಾಮಗಳಿಗೆ ಆ ವಿಶಿಷ್ಟ ನಾಮಗಳನ್ನೇ ರೂಪಾಂತರಗೊಳಿಸದೆ ಸಮಾನವಾಗಿ ಉಭಯ ಭಾಷೆಗಳಲ್ಲಿಯೂ ಪ್ರಯೋಗಿ ಸಲಾಗುತ್ತದೆ. ಶಿಶಿಲ ಗ್ರಾಮದಲ್ಲಿ ದೇವಸ–ದೇನೊಡಿ ಮುಂತಾದ ಸ್ಥಳಗಳಿವೆ. ಇವುಗಳಂತೆ ಶಿಶಿಲದಲ್ಲಿ ಅಂತರ್ಗತವಾದ ಶ್ರೀ ಶಿಶಿಲೇಶ್ವರ ದೇವಾಲಯದ ಪರಿಸರದ ಸೀಮಿತ ಪ್ರದೇಶಕ್ಕೆ ಮಾತ್ರವೇ ಹಿಂದೆ "ದೆಸಿಲ್" ಎಂಬ ಸ್ಥಳ ನಾಮವಿತ್ತೆಂದು ಸ್ವಯಂವೇದ್ಯವಾಗುತ್ತದೆ. ಒಂದು ಪ್ರಧಾನ ಕ್ಷೇತ್ರದ ಪ್ರಸಿ ದ್ಧಾಭಿಧಾನವನ್ನೇ ಊರಿಗೆ ಇಡುವ ಸಂಪ್ರದಾಯವಿದೆ. ಅದರಂತೆ ತುಳುವರು ಈ ಗ್ರಾಮಕ್ಕೆ "ದೆಸಿಲ್" ಎಂಬ ಸುಲಭೋಚ್ಚಾರದ ಅಂಕಿತ ನಾಮವನ್ನು ಪ್ರಯೋಗಿಸಿರಬಹುದು. ಆದುದರಿಂದ ಶಿಶಿಲಕ್ಕೆ ತುಳುವಿನಲ್ಲಿ "ದೆಸಿಲ್" ಎಂಬ ನಾಮಾಂತರವೂ ಪ್ರಾಪ್ತವಾಯಿತು. ಆದರೆ ತುಳುವರು ಈ ಊರನ್ನು "ದೆಸಿಲ್"ಎಂದು ಕರೆದರೂ ಶಿಶಿಲೇಶ್ವರನನ್ನು "ಸಿಸಿಲೇಸ್ವರ"ನೆಂದು ಹೇಳುವರು "ದೆಸಿಲೇಸ್ವರ" ಎನ್ನುವುದಿಲ್ಲ. [ದೆಸಿಲದೇವೆರ್ ಎಂದು ಮುಗ್ಧರು ಕರೆಯು ವುದುಂಟು] ಆದುದರಿಂದ ಪೂರ್ವಕಾಲದಲ್ಲಿಯೇ ಈ ಪ್ರದೇಶಕ್ಕೆ ಶಿಶಿಲವೆಂಬ ನಾಮಧೇಯವಿತ್ತೆಂದು ಖಚಿತವಾಗುತ್ತದೆ. ಶ್ರೀ ಶಿಶಿಲೇಶ್ವರ ಸನ್ನಿಧಿ ಪ್ರದೇಶವನ್ನೂ ಇತರ ಅನೇಕ ಸ್ಥಳಗಳನ್ನೂ ಒಳಗೊಂಡ ವಿಶಾಲ ಗ್ರಾಮಕ್ಕೆ ಪೂರ್ವಿಕರು ಶಿಶಿಲ (ಶ್ರೀ ಶೈಲ) ವೆಂಬ ದಿವ್ಯ ನಾಮವನ್ನು ಪ್ರಯೋಗಿಸಿದ ರೆಂದು ವ್ಯಕ್ತವಾಗುವುದು.

ಹಿಂದೆ ವಿಶಾಲವಾಗಿದ್ದ ಶ್ರೀ ಶೈಲಪ್ರದೇಶದಲ್ಲಿ ಈಗಿನ ಶಿಶಿಲ-ಶಿಬಾಜೆ-ಶಿರಾಡಿ ಗ್ರಾಮಗಳೂ ಮೂಡುಗೆರೆ ತಾಲೂಕಿನ ಸ್ವಲ್ಪ ಗಿರಿವನ ವಿಭಾಗವೂ ಸಮಾವೇಶವಾಗಿದ್ದುವು. ಸಹ್ಯಾದ್ರಿಯ ಪೂರ್ವಭಾಗದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ನಿರ್ಮಾಣಗೊಂಡಿರುವ ಭೈರವಾಲಯಗಳು ಪ್ರಾಚೀನ ತುಳು ನಾಡಿನ ಮೇರೆಯ ದೇವಸ್ಥಾನಗಳೆಂದು ಪೂರ್ವಿಕರ ಹೇಳಿಕೆಯಿಂದ ತಿಳಿಯುತ್ತದೆ.

ಆದುದರಿಂದ ಮೂಡುಗೆರೆ ತಾಲೂಕಿನ ದೇವರ ಮನೆ-ಭೈರವಪುರಗಳ ಭೈರವ ದೇವ್ಪಾಲಯಗಳವರೆಗೆ ಹಿಂದೆ ಶ್ರೀಶೈಲದ ವ್ಯಾಪ್ತಿಯಿತ್ತೆಂದು ನಿಶ್ಚಯವಾಗುತ್ತವೆ. ಈ ಭೈರವಾಲಯಗಳ ದೇವತಾರ್ಚನಾ ವಿಧಾನವೂ ದೇವವೃಂದದ ಪ್ರಸನ್ನ ರಾಮೇಶ್ವರ ದೇವಸ್ಥಾನದ ಆರಾಧನಾ ವಿಧಿಯೂ ಶ್ರೀ ಶಿಶಿಲೇಶ್ವರ ದೇವಾಲಯದ ಪೂಜಾ ಪದ್ಧತಿಯೂ ಸಮಾನವಾಗಿವೆ. ಮೂಡುಗೆರೆ ತಾಲೂಕಿನ ಇತರ ದೇವಸ್ಥಾನಗಳ ಪೂಜಾ ಸಂಪ್ರದಾಯಂಗಳು ಭಿನ್ನ ರೀತಿಯಲ್ಲಿವೆ ಆದುದರಿಂದ ಶ್ರೀ ಶೈಲದಲ್ಲಿ ಸಹ್ಯಾದ್ರಿಶಾಖೆಯೂ ಸೇರಿತ್ತೆಂದು ಖಚಿತವಾಗುತ್ತದೆ.

ಅತ್ಯುನ್ನತವಾದ ಅಮೆದಿಕಲ್ಲು ಬೆಟ್ಟದಿಂದ ದೇವರಬೆಟ್ಟದವರೆಗೆ ಹಬ್ಬಿರುವ ಸಹ್ಯಾದ್ರಿ ಶಾಖೆಗೆ ಶಿಶಿಲಗುಡ್ಡೆಯೆಂದೂ ಸಾಲಗುಡ್ಡೆಯೆಂದೂ ಹೆಸರಿದೆ. ಈ ಶೈಲಶ್ರೇಣಿಗೆ ಹಿಂದೆ ಸಂಸ್ಕೃತದಲ್ಲಿ ಶ್ರೀ ಪರ್ವತವೆಂಬ ವಿಶಿಷ್ಟನಾಮವನ್ನು ಪ್ರಯೋಗಿಸಲಾಗುತ್ತಿತ್ತು. ಇದರ ಉಪತ್ಯಕ ಪ್ರದೇಶದಲ್ಲಿರುವ ಶಿಶಿಲ-ಶಿಬಾಜೆ-ಶಿರಾಡಿ-ಸಿರಿಬಾಗಿಲು ಎಂಬ ಗ್ರಾಮಗಳ ಹೆಸರುಗಳನ್ನು ಪರಿಶೀಲಿಸಿದರೆ ಶಿಶಿಲಗುಡ್ಡೆ (ಸಾಲಗುಡ್ಡೆ)ಗೆ ಶ್ರೀ ಪರ್ವತವೆಂಬ ಸಮುಚಿತವಾದ ನಾಮಧೇಯವಿತ್ತೆಂದು ಸ್ಪಷ್ಟವಾಗುತ್ತದೆ.

— ೨ —

ಕ್ರಿಸ್ತಶಕ ನಾಲ್ಕನೆಯಶತಾಬ್ದದಲ್ಲಿ ಕದಂಬ ಮಹಾರಾಜನಾದ ಕಾಕುತ್ಸ್ಥವರ್ಮನ ಕಾಲದಲ್ಲಿ ಬರೆಯಲಾದ ಶಿವಮೊಗ್ಗ ಜಿಲ್ಲೆಯ ತಾಳಗುಂದದ(ಸ್ಥಾನಕುಂದೂರುವಿನ) ಪ್ರಣವೇಶ್ವರ ದೇವಾಲಯದ ಸಮ್ಮುಖದಲ್ಲಿರುವ ಶಿಲಾಶಾಸನದಲ್ಲಿ ಶ್ರೀ ಪರ್ವತದ ಉಲ್ಲೇಖವಿದೆ. ಕ್ರಿಸ್ತಶಕ ಮೂರನೆಯ ಶತಾಬ್ಧದಲ್ಲಿ ಕದಂಬಕುಲದ ಮಯೂರ ಶರ್ಮನೆಂಬ ಬ್ರಾಹ್ಮಣನು ಸ್ವಪ್ರಯತ್ನದಿಂದ ರಾಜ್ಯವನ್ನು ಸಂಪಾದಿಸಿ ಮಹಾರಾಜನಾದ ವೃತ್ತಾಂತವನ್ನು ಈ ಶಾಸನದಲ್ಲಿ ನಿರೂಪಿಸಲಾಗಿದೆ.

ಸಂಸ್ಕೃತ ಲಿಪಿಯ ಈ ಶಿಲಾ ಲೇಖದ ತಾತ್ಪರ್ಯವು ಹೀಗಿದೆ:—

ದ್ವಿಜಜಾತಿಯ ಹಾರಿ ಶ್ರೀಪುತ್ರ ವಂಶದ ಮಾನವ್ಯಗೋತ್ರದ ಕದಂಬ ಕುಲದ ಮಯೂರ ಶರ್ಮನು ವೇದ ಶಾಸ್ತ್ರ ಪ್ರವಚನವನ್ನು ತಿಳಿಯಲು ಗುರುವೀರ ಶರ್ಮನೊಡನೆ ಪಲ್ಲವೇಂದ್ರಪುರಿಯಾದ ಕಾಂಚಿಗೆ ಹೋಗಿ ಅಲ್ಲಿ ಘಟಿಕಾಸ್ಥಾನದಲ್ಲಿ ಸೇರಿದನು. ತರ್ಕಕುಶಲನಾದ ಅವನಿಗೆ ಪಲ್ಲವೇಶ್ವರಾಸ್ಥಾನದಲ್ಲಿ ತೀವ್ರವಾದ ಕಲಹವುಂಟಾಗಲು ರೋಷತಾಳಿದನು. ಗುರುಕುಲದಲ್ಲಿ ಬಹಳ ಪರಿಶ್ರಮದಿಂದ ಅಧ್ಯಯನ ಮಾಡಿ ಬ್ರಹ್ಮಸಿದ್ಧಿಯನ್ನು ಸಂಪಾದಿಸುವ ವಿಪ್ರರನ್ನು ಕ್ಷತ್ರಿಯರು ಬಲಹೀನರೆಂದು ಅಪಮಾನಗೊಳಿಸುವ ಸಂಗತಿಯನ್ನು ಮಯೂರ ಶರ್ಮನು ಅರಿತು ಮನಸ್ಸಿನಲ್ಲಿ ಕೊರಗಿದನು. ಕುಶಸಮಿಧಾದಿಗಳನ್ನು ಹಿಡಿಯುವ ಕೈಯಲ್ಲಿ ಅವನು ಖಡ್ಗವನ್ನು ಧರಿಸಿ ಭೂಮಂಡಲವನ್ನು ಜಯಿಸಬೇಕೆಂದು ಸಂಕಲ್ಪಿಸಿ ಹೊರಟನು. ಪಲ್ಲವೇಂದ್ರರ ಪ್ರಾಂತಪಾಲರನ್ನು ಅವನು ಸಾಹಸದಿಂದ ಯುದ್ಧದಲ್ಲಿ ಸೋಲಿಸಿ **ಶ್ರೀ ಪರ್ವತ** ದ್ವಾರದ ದುರ್ಗಮವಾದ ಅಡವಿಯಲ್ಲಿ ನೆಲಸಿದನು. ["ಯೋಽಂತ ಪಾಲಾನ್ ಪಲ್ಲವೇಂದ್ರಾಣಾಂ ಸಹಸಾ ವಿನಿರ್ಜಿತ್ಯಸಂಯುಗೇ ಅಧ್ಯುವಾಸ ದುರ್ಗಮಾಮ್ ಅಟವೀಂ "**ಶ್ರೀ ಪರ್ವತ**" ದ್ವಾರ ಸಂಶ್ರಿತಾಮ್"]. ಅನಂತರ ಅವನು ಬೃಹದ್ಬಾಣಾದಿ ಅನೇಕ ಮಾಂಡಲಿಕ ರಾಜರಿಂದ ಕರವನ್ನು ಸಂಗ್ರಹಿಸಿದನು. ಆತನ ದಾಳಿಯಿಂದ ಕುಪಿತರಾದ ಕಾಂಚಿ ನರೇಂದ್ರರು ಅವನನ್ನು ಇದುರಿಸಲು ನಿಶ್ಚಯಿಸಿದರು. ಪಲ್ಲವ ಸೈನಿಕರು ನಿಮ್ನೋನ್ನತವಾದ ವಿಷಮ ಪ್ರದೇಶದಲ್ಲಿ ಪ್ರಯಾಣ ಮಾಡುತ್ತಾ ರಾತ್ರಿ ಕಾಲದಲ್ಲಿ ವಿಶ್ರಮಿಸುತ್ತಾ ಬರಲು ಮಯೂರ ಶರ್ಮನು ಪಲ್ಲವ ಸೇನಾ ಸಾಗರದ ಮೇಲೆ ಗಿಡುಗನಂತೆ ಎರಗಿ ಸಂಹರಿಸಿದನು. ಕೊನೆಗೆ ಪಲ್ಲವ ರಾಜರು ಆತನ ಶಕ್ತಿ ಪ್ರತಾಪವಂಶಾದಿ ವಿಚಾರವನ್ನು ಪರಿಭಾವಿಸಿ ಅವನನ್ನು ತಮ್ಮ ಮಿತ್ರನಾಗಿ ಮಾಡಿಕೊಂಡರು. ಅನಂತರ ಪಲ್ಲವ ರಾಜರು ಮಯೂರ ಶರ್ಮನಿಗೆ ತಮ್ಮ ಕೈಯಿಂದಲೇ ಪಟ್ಟಕಟ್ಟಿ ಪಶ್ಚಿಮ ಸಮುದ್ರದಿಂದ ಪ್ರೇಹಾರದ ವರೆಗಿರುವ ಭೂ ಪ್ರದೇಶವನ್ನು ಬಿಟ್ಟುಕೊಟ್ಟು ಸನ್ಮಾನಿಸಿದರು. [ಪ್ರಾಯಶಃ ಪಲ್ಲವ ರಾಜನಾದ ಶಿವಸ್ಕಂದ ವರ್ಮನು ಮಯೂರ ಶರ್ಮನನ್ನು ಮಹಾರಾಜನೆಂದು ಗೌರವಿಸಿರಬಹುದು.]

ಕುಬ್ಜಕವಿ ಕಾವ್ಯಶೈಲಿಯಲ್ಲಿ ಬರೆದ ಶಿಲಾ ಲೇಖದಲ್ಲಿ ಉಲ್ಲೇಖಗೊಂಡ ಶ್ರೀ ಪರ್ವತವೆಂಬ ಹೆಸರಿನ ಪ್ರದೇಶವು ಪಲ್ಲವ ಸಾಮ್ರಾಜ್ಯದ ಗಡಿಯಲ್ಲಿ ಇಲ್ಲದಿರುವುದರಿಂದ ಇದು ಶ್ರೀ ಶೈಲದ ನಾಮಾಂತರವೆಂದು ಇತಿಹಾಸ ತಜ್ಞರು ಅಭಿಪ್ರಾಯ ಪಟ್ಟಿರುವರು. ಆಂಧ್ರಪ್ರದೇಶದ ಪ್ರಸಿದ್ಧ ಕ್ಷೇತ್ರವಾದ ಶ್ರೀ ಶೈಲವು ಶ್ರೀ ಪರ್ವತವಾಗಿರಬಹುದೆಂದು ಹಿಂದೆ ಕೆಲವು ಮಹನೀಯರು ಭಾವಿಸಿದ್ದರು. ಆದರೆ ಮಯೂರಶರ್ಮನು ತನಗೆ ಅಪರಿಚಿತವಾದ ದೂರದ ಆಂಧ್ರಕ್ಕೆ ಹೋಗಿರಲಾರನೆಂದು ಅನೇಕ ವಿದ್ವಾಂಸರು ಸಂಶಯಪಟ್ಟು ಶ್ರೀ ಪರ್ವತವು ಸಹ್ಯಾದ್ರಿ ಶಾಖೆಯ ಒಂದು ಪ್ರದೇಶವಾಗಿರಬಹುದೆಂದು ನಿರೂಪಿಸಿರುವರು. ಪ್ರಖ್ಯಾತ ಪವಿತ್ರ ಕ್ಷೇತ್ರವಾದ ಶ್ರೀ ಶೈಲಕ್ಕೆ ಶಾಸನಕವಿ ನಿರರ್ಥಕವಾಗಿ ಶ್ರೀ ಪರ್ವತವೆಂಬ ನಾಮಾಂತರವನ್ನು ಪ್ರಯೋಗಿಸಲಾರನು ಆಂಧ್ರದ ಶ್ರೀ ಶೈಲವೆಂದು ಭ್ರಮಿಸಬಾರದೆಂಬ ಉದ್ದೇಶದಿಂದಲೇ ಅವನು ಶಾಸನದಲ್ಲಿ ಶ್ರೀ ಪರ್ವತವೆಂಬ ನಾಮಧೇಯವನ್ನು ಬರೆದಿರಬಹುದು.

ಮಯೂರ ಶರ್ಮನು ಕಾಂಚಿಯಿಂದ ಹೊರಟು ಬಳ್ಳಾರಿ ಅಥವಾ ಚಿತ್ರದುರ್ಗ ಜಿಲ್ಲೆಯ ಪರ್ವತ ಪ್ರದೇಶಕ್ಕೆಹೋಗಿ ತಂಗಿರಬಹುದೆಂದು ಕೆಲವರ ಅಭಿಪ್ರಾಯವಿದೆ. ಆದರೆ ಆಗ ಆ ಜಿಲ್ಲೆಗಳು ಪಲ್ಲವರಾಜರ ಅಧೀನದಲ್ಲಿ ಇದ್ದುದರಿಂದ ಅಲ್ಲಿಗೆ ಮಯೂರ ಶರ್ಮನು ಹೋಗಿ ಸೇನಾ ಸಂಗ್ರಹ ಮಾಡುವಂತಿಲ್ಲ. ಆ ಜಿಲ್ಲೆಗಳಲ್ಲಿ ಶ್ರೀ ಪರ್ವತ ಅಥವಾ ಶ್ರೀ ಶೈಲವೆಂಬ ಪ್ರದೇಶವೂ ಕಾಣಿಸುವುದಿಲ್ಲ.

ಪೂರ್ವೋಕ್ತ ಶಾಸನದಲ್ಲಿ ಪಲ್ಲವರಾಜನು ಪಶ್ಚಿಮ ಸಮುದ್ರ ತೀರದಿಂದ ಪ್ರೇಹಾರದ ವರೆಗಿರುವ ರಾಜ್ಯವನ್ನು ಮಯೂರ ಶರ್ಮನಿಗೆ ಬಿಟ್ಟುಕೊಟ್ಟನೆಂದು ವರ್ಣಿಸಲಾಗಿದೆ. ಆದುದರಿಂದ ಈ ಪ್ರದೇಶವು ಪಲ್ಲವ ಸಾಮ್ರಾಜ್ಯದ ಭಾಗವಾಗಿತ್ತೆಂದು ನಿಶ್ಚಯವಾಗುತ್ತದೆ. ಹಿಂದೆ ಬನವಾಸಿಯಲ್ಲಿದ್ದ ಚುಟು ವಂಶದ ಅರಸರ ರಾಜ್ಯವನ್ನು ಆಗ ಪಲ್ಲವ ರಾಜರು ವಶಪಡಿಸಿ ಕೊಂಡಿದ್ದರು.

ಆದುದರಿಂದ ಪಲ್ಲವರ ಆಕ್ರಮಣಕ್ಕೊಳಗಾದ ತನ್ನ ತವರೂರಿಗೆ ಹೋದರೆ ವಿರೋಧಿಗಳನ್ನು ಇದುರಿಸಲು ಬ್ರಾಹ್ಮಣನಾದ ತನಗೆ ಜನತೆಯ ಬೆಂಬಲವು ಲಭಿಸಲಾರದೆಂದು ಮಯೂರ ಶರ್ಮನು ಗ್ರಹಿಸಿ ಪಲ್ಲವ ಸಾಮ್ರಾಜ್ಯದ ಗಡಿಯಲ್ಲಿದ್ದ ಆಲೂಪಾದಿ ತೌಳವರಾಜರ ಆಧೀನದಲ್ಲಿದ್ದ ತುಳು ನಾಡಿಗೆ ಆಗಮಿಸಿದನೆಂದು ಎಣಿಸಿದರೆ ಅಸಂಗತವಾಗಲಾರದು.

ತುಳು ನಾಡಿಗೆ ಒಳನಾಡಿನ ಉನ್ನತ ಪ್ರಸ್ಥ ಭೂಮಿಯಿಂದ ಇಳಿದು ಬರಲು ಶ್ರೀ ಪರ್ವತ ಪಙ್ತಿಯು (ಶಿಶಿಲ ಸಾಲ ಗುಡ್ಡೆಯು) ಶಿಶಿಲ ಕಣಿವೆ ತಗ್ಗಾಗಿರುವುದರಿಂದ ಅನುಕೂಲಕರವಾಗಿದೆ. ಈಗಲೂ ಅನೇಕ ವ್ಯಕ್ತಿಗಳು ಈ ಹಾದಿಯಲ್ಲಿಯೇ ಹೋಗಿ ಬರುವುದುಂಟು. ಮಯೂರ ಶರ್ಮನು ಶ್ರೀ ಪರ್ವತದ್ವಾರದ ಶಿಶಿಲ ಶಿರಾಡಿಯ ಅಡವಿಗಳಲ್ಲಿ ಆಶ್ರಯ ಪಡೆದು ಅರಣ್ಯವಾಸಿಗಳ ಸಹಾಯದಿಂದ ಪಲ್ಲವ ಸೇನೆಯನ್ನು ಇದುರಿಸಿರ ಬಹುದು. ತುಳು ನಾಡಿನ ಗಡಿಯಲ್ಲಿದ್ದ ಕೆಲವು ಅರಸರೂ ಅವನಿಗೆ ಸಹಕಾರ ನೀಡಿರ ಬಹುದು. ಪಲ್ಲವ ರಾಜರಲ್ಲಿ ಅಸಮಾಧಾನಗೊಂಡಿದ್ದ ಸಾಮಂತರಾದ ಬಾಣಾದಿ ರಾಜರು ಅವನಿಗೆ ಸಹಾಯ ಮಾಡಿರ ಬಹುದು. ಅಂತೂ ಮಯೂರಶರ್ಮನು ಶಿಶಿಲದ ಅರಣ್ಯ ಪ್ರದೇಶದಲ್ಲಿ ನೆಲಸಿ ಜನತೆಯ ಬೆಂಬಲ ಪಡೆದು ಪಲ್ಲವ ರಾಜರ ಸೇನೆಯನ್ನು ನಿಗ್ರಹಿಸಿ ಜಯಶಾಲಿಯಾದನೆಂದು ಮನವರಿಕೆಯಾಗುತ್ತದೆ.

ಹಿಂದಿನ ಚರಿತ್ರಕಾರರಿಗೆ ಮಲೆನಾಡಿನ ಹಳ್ಳಿಯಾದ ಶಿಶಿಲದ ಪರಿಚಯವಿರಲಿಲ್ಲ. ಆದುದರಿಂದ ಶ್ರೀ ಪರ್ವತವು ಯಾವ ಸ್ಥಳವೆಂದು ನಿರ್ಧರಿಸಲು ಸಾಧ್ಯವಾಗಲಿಲ್ಲ. ಈಗ ಅನೇಕ ಇತಿಹಾಸಕಾರರು ಶಿಶಿಲವೇ ಶ್ರೀ ಶೈಲವೆಂದೂ ಇದರ ಗಡಿಯಲ್ಲಿರುವ ಗಿರಿಪಙ್ತಿಯೇ ಶ್ರೀ ಪರ್ವತವೆಂದೂ ನಿರೂಪಿಸಿರುವರು ಆದುದರಿಂದ ಶಿಶಿಲವು ಕದಂಬ ಸಾಮ್ರಾಜ್ಯ ಸಂಸ್ಥಾಪಕನಾದ ಮಯೂರ ಶರ್ಮನು ತನ್ನ ವಿಜಯಯಾತ್ರೆಯನ್ನು ಪ್ರಾರಂಭಿಸಿದ ಐತಿಹಾಸಿಕ ಸ್ಥಳವೆಂದು ಪರಿಗಣಿಸಬಹುದು.

ಅಚ್ಚ ಕನ್ನಡಿಗನಾದ ಮಯೂರ ಶರ್ಮನು ಮಹಾ ರಾಜನಾಗಿ ಬನವಾಸಿಯ ರಾಜಧಾನಿಯಲ್ಲಿ ನೆಲಸಿ ರಾಜ್ಯವನ್ನು ಆಳತೊಡಗಿದನು. ಅನಂತರ

ಅವನು ತುಳುನಾಡಿಗೂ ಅಧಿಪತಿಯಾದನೆಂದು ಪ್ರಾಚೀನ ಗ್ರಂಥಗಳ ಆಧಾರದಿಂದ ನಿರ್ಣಯಿಸಬಹುದು. ಸ್ಕಾಂದ ಪುರಾಣದ ಸಹ್ಯಾದ್ರಿಖಂಡ ಗ್ರಾಮ ಪದ್ಧತಿ ಇತ್ಯಾದಿ ಪುಸ್ತಕಗಳಲ್ಲಿ ಮಯೂರ ಶರ್ಮನು ತೌಳವ ಪ್ರದೇಶವನ್ನು ಪಾಲಿಸುತ್ತಿದ್ದನೆಂದೂ ಅಹಿಚ್ಛತ್ರ (ಅಹಿಕ್ಷೇತ್ರ)ದಿಂದ ವೇದ ವಿದ್ಯಾಪಾರಂಗತರಾದ ಬ್ರಾಹ್ಮಣರ ಕುಟುಂಬಗಳನ್ನು ಕರೆತರಿಸಿ ತುಳುನಾಡಿನ ಮೂವತ್ತೆರಡು ಗ್ರಾಮಗಳಲ್ಲಿ ನೆಲೆಗೊಳಿಸಿದನೆಂದೂ ವಿವರಿಸಲಾಗಿದೆ. ಈ ಸಂಗತಿಯನ್ನು ಪೂರ್ವಿಕರ ಪರಂಪರಾಗತವಾದ ಹೇಳಿಕೆಗಳೂ ಪುಷ್ಟೀಕರಿಸುತ್ತವೆ. ಈ ಗ್ರಂಥಗಳಲ್ಲಿ ಬಹಳ ಉತ್ಪ್ರೇಕ್ಷೆಯು ಅವಾಸ್ತವ ಕಥಾಂಶವಿದ್ದರೂ ಮಯೂರ ಶರ್ಮನು ತುಳುನಾಡಿಗೂ ಪ್ರಭುವಾಗಿದ್ದನೆಂಬ ವಿಷಯವನ್ನು ಒಪ್ಪಬಹುದು. ಆದರೆ ಈ ಅಭಿಪ್ರಾಯವನ್ನು ಸಮರ್ಥಿಸಲು ಈ ವರೆಗೆ ಶಾಸನಾಧಾರಗಳು ಲಭಿಸಿಲ್ಲ.

ಮಯೂರ ಶರ್ಮನ ಅನಂತರ ಅನುಕ್ರಮವಾಗಿ ಕಂಗವರ್ಮ-ಭಗೀರಥ ರಘು – ಕಾಕುತ್ಸ್ಥವರ್ಮರು ಬನವಾಸಿಯಲ್ಲಿ ಪಟ್ಟಾಭಿಷಿಕ್ತರಾಗಿ ಕದಂಬ ಸಾಮ್ರಾಜ್ಯವನ್ನು ಪಾಲಿಸಿದರು. ಕಾಕುತ್ಸ್ಥವರ್ಮನ ಆಳಿಕೆಯ ಕಾಲದಲ್ಲಿ ತುಳುನಾಡಿನ ಆಲೂಪರಾಜರು ಸಾಮಂತರಾಗಿದ್ದರೆಂದು ಚರಿತ್ರೆಯಲ್ಲಿ ನಿರೂಪಿಸಲಾಗಿದೆ. ಆದುದರಿಂದ ಕದಂಬ ಸಾಮ್ರಾಜ್ಯದಲ್ಲಿ ಈಗಿನ ಉತ್ತರ ಕನ್ನಡ ಬೆಳಗಾಂವ್– ಧಾರವಾಡ– ಬಿಜಾಪುರ– ಬಳ್ಳಾರಿ– ಶಿವಮೊಗ್ಗ–ತುಮಕೂರು– ಚಿತ್ರದುರ್ಗ– ಚಿಕ್ಕಮಗಳೂರು– ದಕ್ಷಿಣಕನ್ನಡ– ಹಾಸನ– ಜಿಲ್ಲೆಗಳ ಬಹಳ ಪ್ರದೇಶವು ಸಮಾವೇಶವಾಗಿತ್ತೆಂದು ನಿಶ್ಚಯವಾಗುತ್ತದೆ.

೩

ಕರ್ಣಾಟಕದ ಸುಪ್ರಸಿದ್ಧ ಮಹಾರಾಜನಾದ ಕಾಕುತ್ಸ್ಥವರ್ಮನ ನಿಧನದ ಬಳಿಕ ಅವನ ಪುತ್ರರು ವಿಸ್ತಾರವಾದ ಕದಂಬ ಸಾಮ್ರಾಜ್ಯವನ್ನು ವಿಭಜಿಸಿಕೊಂಡು ಆಳಿದರು. ಬನವಾಸಿಯಲ್ಲಿ ಶಾಂತಿವರ್ಮನೂ ತ್ರಿಪರ್ವತದಲ್ಲಿ ಒಂದನೆಯ ಕೃಷ್ಣವರ್ಮನೂ ನೆಲಸಿ ರಾಜ್ಯವನ್ನು ಪರಿಪಾಲಿಸಿದರು. ತ್ರಿಪರ್ವತದಲ್ಲಿ ಆಳುತ್ತಿದ್ದ ಒಂದನೆಯ ಕೃಷ್ಣವರ್ಮ ಧರ್ಮ ಮಹಾರಾಜನು ಅಶ್ವಮೇಧಯಾಗ ಮಾಡಿ ಆ ಕಾಲದ ರಾಜ ಮಂಡಲದಲ್ಲಿ ಅಗ್ರಗಣ್ಯನೆನಿಸಿ ಪ್ರಖ್ಯಾತ ಪಡೆದನು. ಅವನ ವಂಶಜರು ಮತ್ತೆ ತ್ರಿಪರ್ವತದಲ್ಲಿಯೇ ಇದ್ದು ಅನೇಕ ವರ್ಷಗಳ ವರೆಗೆ ರಾಜ್ಯಭಾರ ನಿರ್ವಹಿಸಿದರು. ಆದರೆ ಈ ಕದಂಬರಾಜರ ರಾಜಧಾನಿಯಾಗಿದ್ದ ತ್ರಿಪರ್ವತವೆಂಬ ಸ್ಥಳವನ್ನಾಗಲಿ ಅಥವಾ ಇದರ ಸಮಾ

ಸಾರ್ಥಕ ನಾಮಧೇಯವಿರುವ ಪ್ರದೇಶವನ್ನಾಗಲಿ ಈಗ ಕರ್ಣಾಟಕದಲ್ಲಿ ಗುರುತಿಸಲು ಅಶಕ್ಯವಾಗಿದೆ. ಪ್ರಾಚೀನ ತ್ರಿಪರ್ವತವು ಈಗಿನ ಹಳೆಬೀಡು ಎಂದೂ ದೇವಗಿರಿಯೆಂದೂ ಮುರುಗೋಡು ಎಂದೂ ಶಿಶಿಲವೆಂದೂ ಬೇರೆ ಬೇರೆ ವಿದ್ವಾಂಸರು ವಿಭಿನ್ನ ರೀತಿಯ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿರುವರು. ಪ್ರಾಕೃತಿಕ ಲಕ್ಷಣವನ್ನು ಪರಿಶೀಲಿಸಿದರೆ ಹಳೆಬೀಡು –ದೇವಗಿರಿ–ಮುರುಗೋಡುಗಳಲ್ಲಿ ಮೂರು ಪರ್ವತಗಳು ಪರಸ್ಪರ ಸಮೀಪದಲ್ಲಿ ಇಲ್ಲದಿರುವುದರಿಂದ ಇವುಗಳಲ್ಲಿ ಯಾವ ಸ್ಥಳವನ್ನೂ ತ್ರಿಪರ್ವತವೆಂದು ಎಣಿಸುವಂತಿಲ್ಲ. ಕದಂಬ ಸಾಮ್ರಾಜ್ಯ ವಿಭಜನೆಯಾದ ಅನಂತರ ಉತ್ತರ ಭಾಗಕ್ಕೆ ಬನವಾಸಿಯೂ ದಕ್ಷಿಣ ವಿಭಾಗಕ್ಕೆ ತ್ರಿಪರ್ವತವೂ ರಾಜಧಾನಿಗಳಾಗಿದ್ದುವೆಂದು ಚರಿತ್ರಕಾರರ ಅಭಿಪ್ರಾಯವಿದೆ. ಕದಂಬ ಸಾಮ್ರಾಜ್ಯವನ್ನು ಸಂಸ್ಥಾಪಿಸಿದ ತಮ್ಮ ವಂಶದ ಪೂರ್ವಜನಾದ ಮಯೂರ ಶರ್ಮ ಮಹಾರಾಜನು ಸಂಚರಿಸಿದ ಇತಿಹಾಸ ಪ್ರಸಿದ್ಧ ಪ್ರದೇಶವೂ ಅಭೇದ್ಯ ಗಿರಿ ದುರ್ಗಾವೃತವಾದ ಪ್ರಸಸ್ತ ಸ್ಥಳವೂ ದಕ್ಷಿಣ ವಲಯದ ಕೇಂದ್ರ ಸ್ಥಾನವೂ ಆದ ತ್ರಿಪರ್ವತದ ಆಸನ್ನ ಭೂಮಿಯಲ್ಲಿ ಮತ್ತಿನ ಕದಂಬ ರಾಜರು ರಾಜಧಾನಿಯನ್ನು ನಿರ್ಮಿಸಿದರೆಂದು ನಿರ್ಧರಿಸಲು ಸಾಧ್ಯವಿದೆ. ಶ್ರೀ ಪರ್ವತವೆಂಬ ನಾಮಧೇಯವು ಅದರ ಉಪತ್ಯಕ ಪ್ರದೇಶದಲ್ಲಿ ಸೃಷ್ಟಿಗೊಂಡ ನಗರಕ್ಕೆ ತ್ರಿ ಪರ್ವತವೆಂಬ ವಿಶಿಷ್ಟ ನಾಮವನ್ನು ಇಡಲು ಪ್ರೇರಣೆ ನೀಡಿರಬಹುದು. ಶ್ರೀ ಪರ್ವತ ಪಙ್ತಿ (ಶಿಶಿಲಗುಡ್ಡೆ)ಯಲ್ಲಿರುವ ಆನೆಕಲ್ಲು– ಅಮೆದಿಕಲ್ಲು–ರಕ್ಕಸಕಲ್ಲು ಮುಂತಾದ ಮೂರು ಶೈಲಗಳು ಪರಸ್ಪರ ಸಮೀಪದಲ್ಲಿ ಎದ್ದು ನಿಂತಿವೆ. ಉನ್ನತವಾದ ಮೂರು ಕೋಡುಗಳಿರುವ ೧೨೯೯ ಮೀಟರ್ ಎತ್ತರದ ಅಮೆದಿಕಲ್ಲು ಬೆಟ್ಟದ ತಪ್ಪಲಿನಲ್ಲಿ ಹಬ್ಬಿರುವ ಶಿಶಿಲಕ್ಕೆ ಸಂಬಂಧಿಸಿದ ಸುರಕ್ಷಿತಾರಣ್ಯ ಪ್ರದೇಶವನ್ನು ಮೂರು ದಿಕ್ಕುಗಳಲ್ಲಿಯೂ ಗಿರಿ ಶ್ರೇಣಿ ಬಳಸಿಕೊಂಡಿದೆ. ಇಲ್ಲಿ ನಿರ್ಮಾಣಗೊಂಡಿದ್ದ ನಗರಕ್ಕೆ ತ್ರಿ ಪರ್ವತವೆಂಬ ಅನ್ವರ್ಥನಾಮವು ಸಹಜವಾಗಿ ಒಪ್ಪುತ್ತದೆ. ಈ ಪ್ರದೇಶದಲ್ಲಿ ಬಹಳ ಜನವಸತಿ ಇತ್ತೆಂದು ಇಲ್ಲಿಯ ಕುರುಹುಗಳನ್ನು ನೋಡಿದರೆ ತಿಳಿಯುತ್ತದೆ. ಈ ಸ್ಥಳದ ಹತ್ತಿರದಲ್ಲಿ ಹಾದು ಹೋಗುವ ಶಿಶಿಲ ಕಣಿವೆಯ ಮಾರ್ಗವು ಹಿಂದೆ ಕದಂಬ ರಾಜರ ಸ್ವಾಧೀನದಲ್ಲಿದ್ದ ಪೂರ್ವ ಪ್ರಾಂತ್ಯಕ್ಕೂ (ಈಗಿನ ಚಿಕ್ಕಮಗಳೂರು ಜಿಲ್ಲೆಗೂ) ಪಶ್ಚಿಮ ಪ್ರಾಂತ್ಯಕ್ಕೂ (ದಕ್ಷಿಣ ಕನ್ನಡ ಜಿಲ್ಲೆಗೂ) ಸಂಬಂಧವನ್ನು ಕಲ್ಪಿಸುತ್ತಿತ್ತು. ಈ ಮಾರ್ಗಕ್ಕೆ ಶಿರಾಡಿ ಕಣಿವೆ ಮತ್ತು ಚಾರ್ಮಾಡಿ ಕಣಿವೆ

ಗಳ ಮಾರ್ಗಗಳು ಕೂಡಿಕೊಂಡಿದ್ದುದರಿಂದ ಇಲ್ಲಿಗೂ ಇತರ ಪ್ರಾಂತ್ಯಗಳಿಗೂ ಸಂಪರ್ಕವು ಒದಗುತ್ತಿತ್ತು. ಹೀಗೆ ತ್ರಿಕೂಟವಲಯದ ಸಂಧಿ ಸ್ಥಳವಾದ ಅಮೆದಿ ಕಲ್ಲು ಬೆಟ್ಟದ ಮಗ್ಗುಲಿನಲ್ಲಿರುವ ಶ್ರೀಶೈಲಪ್ರದೇಶದಲ್ಲಿ ತ್ರಿಪರ್ವತ ರಾಜಧಾನಿ ಯಿತ್ತೆಂದು ನಿಶ್ಚಯಿಸಬಹುದು. ಹಿಂದೆ ಬನವಾಸಿಯ ಕದಂಬ ಮಹಾರಾಜರ ಉಪರಾಜಧಾನಿಯಾಗಿದ್ದ ತ್ರಿಪರ್ವತ ನಗರವು ಎರಡನೆಯ ಕೃಷ್ಣವರ್ಮ ಧರ್ಮ ಮಹಾರಾಜನ ಕಾಲದಲ್ಲಿ ಪ್ರಧಾನ ರಾಜಧಾನಿಯಾಗಿ ಪ್ರಸಿದ್ಧಿ ಪಡೆಯಿತು.

ಶಿಶಿಲದಿಂದ ಸ್ವಲ್ಪದೂರದಲ್ಲಿಶ್ರೀಪರ್ವತದ(ಶಿಶಿಲಗುಡ್ಡೆಯ)ಪೂರ್ವಭಾಗದ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಮೂಡಗೆರೆಯಲ್ಲಿ ಒಂದನೆಯ ಕೃಷ್ಣ ವರ್ಮನ ಪುತ್ರನಾದ ವಿಷ್ಣುವರ್ಮನ ತಾಮ್ರಶಾಸನವೂ ಅವನ ಕುಮಾರನಾದ ಸಿಂಹವರ್ಮನ ತಾಮ್ರಶಾಸನವೂ ಲಭಿಸಿವೆ. ನೆರೆಯ ಹಾಸನ ಜಿಲ್ಲೆಯ ಬನವಳಿ ಯಲ್ಲಿ ಸಿಂಹವರ್ಮನ ಮಗನಾದ ಎರಡನೆಯ ಕೃಷ್ಣವರ್ಮನ ತಾಮ್ರಶಾಸನವೂ ಸಿಕ್ಕಿದೆ. ಆದುದರಿಂದ ಕದಂಬ ವಂಶದ ಒಂದನೆಯ ಕೃಷ್ಣವರ್ಮನೂ ವಿಷ್ಣುವ ರ್ಮನೂ ಸಿಂಹವರ್ಮನೂ ಎರಡನೆಯ ಕೃಷ್ಣವರ್ಮನೂ ತ್ರಿಪರ್ವತದಲ್ಲಿ ನೆಲಸಿ ಸಾಮ್ರಾಜ್ಯವನ್ನು ಪರಿಪಾಲಿಸುತ್ತಿದ್ದರೆಂದು ಚರಿತ್ರೆಯನ್ನು ಅವಲೋಕಿಸಿದರೆ ತಿಳಿಯುತ್ತದೆ. ಕ್ರಿಸ್ತಶಕ ಐದನೆಯ ಶತಾಬ್ದದ ಆದಿಕಾಲದಿಂದ ಕ್ರಿಸ್ತಶಕ ಆರನೆ ಯ ಶತಾಬ್ದದ ಅಂತ್ಯ ಭಾಗದವರೆಗೆ ತ್ರಿಪರ್ವತವು ಕದಂಬ ಮಹಾರಾಜರ ರಾಜ ಧಾನಿಯಾಗಿತ್ತೆಂದು ಸ್ಪಷ್ಟವಾಗುತ್ತದೆ. ಬನವಾಸಿಯಲ್ಲಿ ಆಳುತ್ತಿದ್ದ ಹರಿವರ್ಮ ಮಹಾರಾಜನ ಅವಸಾನದ ಬಳಿಕ ತ್ರಿಪರ್ವತದ ಎರಡನೆಯ ಕೃಷ್ಣವರ್ಮನು ಪೂರ್ವಜರ ಬನವಾಸಿಯನ್ನು ವಶಪಡಿಸಿ ಮುಖ್ಯ ರಾಜಧಾನಿಯಾಗಿ ಮಾಡಿ ಕೊಂಡು ಅಲ್ಲಿಯೇ ನೆಲಸಿದನು. ಆದುದರಿಂದ ತ್ರಿಪರ್ವತವು ಮತ್ತೆ ಉಪರಾಜ ಧಾನಿಯಾಗಿ ಪರಿಣಮಿಸಿತು. ಅನಂತರ ಕೆಲವು ವರ್ಷಗಳವರೆಗೆ ಕದಂಬ ಸಂತತಿಗೆ ಸಂಬಂಧಿಸಿದ ಅರಸರು ತ್ರಿಪರ್ವತದಲ್ಲಿ ಮಾಂಡಲಿಕರಾಗಿ ಆಳಿರಬಹುದು. ಕ್ರಿಸ್ತ ಶಕ ಆರನೆಯ ಶತಾಬ್ದದಲ್ಲಿ ಚಾಳುಕ್ಯ ರಾಜರು ಕದಂಬ ಮಹಾರಾಜರನ್ನು ಸೋಲಿಸಿದುದರಿಂದ ಮತ್ತೆ ಕದಂಬ ವಂಶಜರು ಸಾಮಂತರಾಗಿ ವಿವಿಧ ಸಂಸ್ಥಾ ನಗಳಲ್ಲಿ ನೆಲಸಿ ರಾಜ್ಯಭಾರ ನಿರ್ವಹಿಸಿದರು. ಕೊನೆಗೆ ಶಿಶಿಲದಲ್ಲಿ ಇದ್ದ ಕದಂಬ ರಾಜನಿಗೆ ಶ್ರೀಪರ್ವತದ ಪಶ್ಚಿಮದಲ್ಲಿರುವ ಒಂದು ಪ್ರಾಂತ್ಯದ ಅಧಿಕಾರ ಮಾತ್ರವೇ ಉಳಿದಿರಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಕಡಬ ಸಂಸ್ಥಾನದ ಕೈಫಿಯತ್ತಿನಲ್ಲಿ ಕಡಬಕ್ಕೆ ಒಬ್ಬ ಕದಂಬ ರಾಜನು ಬಂದು ನೆಲಸಿದನೆಂದು ನಿರೂಪಿಸಲಾಗಿದೆ. ಮಯೂರ ಶರ್ಮನ ಸಂತತಿಯ ಒಬ್ಬ ತೌಳವ ರಾಜನು ಅರಣ್ಯಕ್ಕೆ ಬೇಟೆಗೆ ಹೋದಾಗ ರಸಬಾವಿಯಿರುವ ಪ್ರದೇಶವನ್ನು ನೋಡಿ ರಾಜಧಾನಿಗೆ ಅದು ಪ್ರಶಸ್ತಸ್ಥಳವೆಂದು ಗ್ರಹಿಸಿ ಕಡವೆಗಳನ್ನು ಬೆನ್ನಟ್ಟಿ ಬರುವಾಗ ಕಂಡ ಊರಾದುದರಿಂದ ಅಲ್ಲಿಗೆ ಕಡಬವೆಂದು ಹೆಸರಿಟ್ಟು ಅರಮನೆ ಕೋಟೆಗಳನ್ನು ಕಟ್ಟಿಸಿದನೆಂದೂ ಆ ಕೈಫಿಯತ್ತಿನಲ್ಲಿ ಬರೆಯಲಾಗಿದೆ. ಇದರಲ್ಲಿ ಲೇಖಕನು ಕಡಬವನ್ನು ದಿವ್ಯಸ್ಥಳವೆಂದು ವರ್ಣಿಸುವ ಉದ್ದೇಶದಿಂದ ಆ ಪ್ರದೇಶದಲ್ಲಿ ರಸಬಾವಿಯಿತ್ತೆಂದು ಉಪ್ರೇಕ್ಷೆ ಮಾಡಿ ಅಲ್ಲಿಗೆ ಕದಂಬ ರಾಜನು ಮೃಗಯಾ ವಿಹಾರಕ್ಕೆ ಆಗಮಿಸಿದನೆಂದು ಪೂರ್ವಿಕರ ಹೇಳಿಕೆಯಂತೆ ಕಾಲ್ಪನಿಕ ಕಥೆಯನ್ನು ಸೇರಿಸಿ ಬರೆದಿರಬಹುದು. ಆದರೆ ಕದಂಬ ರಾಜನು ಅನ್ಯಪ್ರದೇಶದಿಂದ ಕಡಬಕ್ಕೆ ಬಂದು ನೆಲಸಿದನೆಂಬ ಸಂಗತಿಯನ್ನು ನಂಬಬಹುದು. ಅತ್ಯಂತ ದೂರದ ಬನವಾಸಿಯಿಂದ ಅವನು ಕಡಬಕ್ಕೆ ಬರುವಂತಿಲ್ಲ. ಆ ಕೈಫಿಯತ್ತಿನಲ್ಲಿ ಅವನನ್ನು ತೌಳವ ರಾಜನೆಂದು ವರ್ಣಿಸಿರುವುದರಿಂದ ತುಳುನಾಡಿಗೆ ಸೇರಿದ ಕಡಬಕ್ಕೆ ಹತ್ತಿರದ ಊರಿನಲ್ಲಿ ವಾಸಿಸುತ್ತಿದ್ದನೆಂದು ಖಚಿತವಾಗುತ್ತದೆ. ತ್ರಿಪರ್ವತನಗರದಲ್ಲಿ ನೆಲಸಿದ್ದ ಒಬ್ಬ ಅರಸನು ಅಲ್ಲಿಗೆ ಬಂದು ಬೇರೆ ಅರಮನೆ ಕಟ್ಟಿಸಿ ವಾಸ ಮಾಡಿದನೆಂದು ಎಣಿಸಬಹುದು. ಆಗ ಕಡಬದ ಪರಿಸರದಲ್ಲಿಯೇ ತ್ರಿಪರ್ವತ ನಗರವಿದ್ದಿರಬಹುದೆಂಬ ಶಂಕೆಮೂಡಲು ಸಾಧ್ಯವಿದೆ. ಆದರೆ ಕಡಬದ ಹತ್ತಿರದಲ್ಲಿ ಮೂರು ಉತ್ತುಂಗ ಪರ್ವತಗಳಿಲ್ಲ. ಮೂರು ಶಿಖರಗಳ ದೊಡ್ಡ ಬೆಟ್ಟವೂ ಇಲ್ಲ. ಇಲ್ಲಿಂದ ಸ್ವಲ್ಪ ದೂರದ ಸುಬ್ರಹ್ಮಣ್ಯದ ಬಳಿಯಲ್ಲಿ ಕುಮಾರ ಪರ್ವತ–ಶೇಷ ಪರ್ವತ ಸಿದ್ಧಪರ್ವತಗಳಿದ್ದರೂ ಪರಸ್ಪರ ಸಮೀಪದಲ್ಲಿ ಗೋಚರಿಸುವುದಿಲ್ಲ. ಯಾವ ಗಿರಿಯಲ್ಲಿಯೂ ಮೂರು ಕೋಡುಗಳಿಲ್ಲ. ಇಲ್ಲಿ ಕದಂಬ ರಾಜರಿದ್ದರೆಂಬ ಐತಿಹ್ಯವೂ ಕೇಳಿ ಬರುವುದಿಲ್ಲ. ಆದುದರಿಂದ ಕಡಬದಿಂದ ಸುಮಾರು ಇಪ್ಪತ್ತು ಕಿಲೋಮೀಟರ್ ದೂರದಲ್ಲಿರುವ ಶಿಶಿಲದಲ್ಲಿಯೇ ತ್ರಿಪರ್ವತ ರಾಜಧಾನಿಯಿತ್ತೆಂದು ಭಾವಿಸಬೇಕಾಗುವುದು. ಪ್ರಾಯಶಃ ಶಿಶಿಲದ ಒಬ್ಬ ಕದಂಬ ರಾಜನು ಕೊನೆಗೆ ತನ್ನ ಸ್ವಾಧೀನದಲ್ಲಿದ್ದ ಸಣ್ಣ ಸಂಸ್ಥಾನಕ್ಕೆ ಕಡಬವು ಕೇಂದ್ರ ಸ್ಥಳವಾಗುವುದೆಂದು ಯೋಚಿಸಿ ಅಲ್ಲಿಗೆ ತನ್ನ ರಾಜಧಾನಿಯನ್ನು ಸ್ಥಳಾಂತರ

ಮಾಡಿರಬಹುದು. ಆಗ ಆ ಅರಸನು ತ್ರಿಪರ್ವತ ನಗರದಲ್ಲಿ ಇದ್ದ ಉತ್ತಮ ಶಿಲೆಗಳನ್ನು ಅರಮನೆ ಕಟ್ಟಲು ಒಯ್ದಿರಬಹುದು. ಅಮೂಲ್ಯ ವಸ್ತುಗಳನ್ನು ಕೊಂಡು ಹೋಗಿರಬಹುದು. ಅನಂತರ ತ್ರಿಪರ್ವತದಲ್ಲಿ ಯಾವ ರಾಜನೂ ನೆಲ ಸದಿದ್ದುದರಿಂದ ಆ ಪಟ್ಟಣವು ನಾಶವಾಗಿ ಕಾಂತಾರ ಪ್ರದೇಶಕ್ಕೆ ಸೇರಿತು.

ಕ್ರಿಸ್ತಶಕ ಒಂಬತ್ತನೆಯ ಶತಾಬ್ದದ ಬಂಟ್ರಶಾಸನದಲ್ಲಿ ಕತಮ್ಬ ಕುಲೋದ್ಭವ ಶ್ರೀ ಪೃಥುವೀರಾಜನ ಉಲ್ಲೇಖವಿದೆ. ಆದುದರಿಂದ ಆ ಕಾಲದಿಂದ ಹಿಂದೆಯೇ ಒಬ್ಬ ಕದಂಬ ರಾಜನು ಶಿಶಿಲದಿಂದ ಕಡಬಕ್ಕೆ ಹೋಗಿ ನೆಲಸಿದನೆಂದು ನಿರ್ಣಯಿಸಬೇಕಾಗುತ್ತದೆ.

ಈ ವಿಷಯವನ್ನು ಪರಿಭಾವಿಸಿದರೆ ಕದಂಬ ಮಹಾರಾಜರ ತ್ರಿಪರ್ವತ ರಾಜಧಾನಿ ಶಿಶಿಲದಲ್ಲಿಇತ್ತೆಂದು ಗ್ರಹಿಸಲು ಆಸ್ಪದವಿದೆ ಆದರೆ ಈ ಅಭಿಪ್ರಾಯವನ್ನು ಪುಷ್ಟೀಕರಿಸಲು ಇಲ್ಲಿ ಶಾಸನಗಳು ಸಿಕ್ಕಿಲ್ಲ. ತ್ರಿಪರ್ವತವು ಕಾನನ ಪ್ರದೇಶಕ್ಕೆ ಸೇರಿದ ಅನಂತರ ಊರಿನ ಜನತೆ ಪ್ರಾಚೀನ ಶಿಲಾಶಾಸನಗಳನ್ನು ತಮ್ಮ ಉಪಯೋಗಕ್ಕಾಗಿ ಅಪಹರಿಸಿರಬಹುದು. ಕೆಲವು ಶಿಲಾಲೇಖಗಳು ಭೂಗತವಾಗಿರಬಹುದು. ಆದುದರಿಂದ ಇಲ್ಲಿ ಚಾರಿತ್ರಿಕ ಆಧಾರಗಳು ಸಿಗುವಂತಿಲ್ಲ. ಭವಿಷ್ಯತ್ಕಾಲದಲ್ಲಿ ಇತಿಹಾಸ ಸಂಶೋಧನೆ ಮಾಡುವಾಗ ಇನ್ನು ಪ್ರಬಲ ಗ್ರಂಥಾಧಾರಗಳು ಲಭಿಸಿ ಶಿಶಿಲವು ಕದಂಬ ಸಾರ್ವಭೌಮರ ರಾಜಧಾನಿಯಾಗಿ ವಿಜೃಂಭಿಸಿದ ಐತಿಹಾಸಿಕ ಸ್ಥಳವೆಂದು ಸರ್ವಸಮ್ಮತವಾದ ನಿರ್ಣಯವು ಪ್ರಕಟವಾಗಬಹುದು.

— ೪ —

ಕ್ರಿಸ್ತಶಕ ಆರನೆಯ ಶತಾಬ್ದದಲ್ಲಿ ಚಾಳುಕ್ಯರು ಕದಂಬ ಮಹಾರಾಜರ ಸಾಮ್ರಾಜ್ಯವನ್ನು ಸ್ವಾಧೀನಪಡಿಸಿ ಕರ್ಣಾಟಕದ ಚಕ್ರವರ್ತಿಗಳಾದರು. ಕ್ರಿಸ್ತಶಕ ಎಂಟನೆಯ ಶತಾಬ್ದದಲ್ಲಿ ರಾಷ್ಟ್ರಕೂಟರು ಕರ್ಣಾಟಕದ ಸಮ್ರಾಟರಾದರು. ಕ್ರಿಸ್ತಶಕ ಹನ್ನೊಂದನೆಯ ಶತಾಬ್ದದಲ್ಲಿ ಹೊಯ್ಸಳರು ಕರ್ಣಾಟಕದ ಪ್ರಭುಗಳಾದರು. ಕ್ರಿಸ್ತಶಕ ಐದನೆಯ ಶತಾಬ್ದದಿಂದ ಹದಿನಾಲ್ಕನೆಯ ಶತಾಬ್ದದವರೆಗೆ ಕನ್ನಡನಾಡನ್ನು ಆಳಿದ ಬೇರೆ ಬೇರೆ ಸಾರ್ವಭೌಮರ ಕಾಲದಲ್ಲಿ ಅಲೂಪ

ವಂಶದ ಅರಸರು ತುಳುನಾಡಿನ ಮಂಡಲೇಶ್ವರರಾಗಿದ್ದರು. ಇತರ ವಿವಿಧ ವಂಶಗಳ ಅನೇಕ ರಾಜರು ತುಳುನಾಡಿನಲ್ಲಿ ಮಾಂಡಲಿಕರಾಗಿ ರಾಜ್ಯಭಾರ ನಿರ್ವಹಿಸುತ್ತಿದ್ದರು.

ತುಳುನಾಡಿನ ನಾನಾಸಂಸ್ಥಾನಗಳಲ್ಲಿ ಜೈನಮತದ ಬಂಗ-ಚೌಟ-ಅಜಿಲ-ಮೂಲ- ಸಾವಂತ- ತೋಳಾರ- ಬಿನ್ನಾಣಿ ಮುಂತಾದ ವಂಶಗಳ ಅರಸರು ಆಳುತ್ತಿದ್ದರು. ಕ್ರಿಸ್ತಶಕ ಹದಿನಾಲ್ಕನೆಯ ಶತಾಬ್ದದಲ್ಲಿ ಪಟ್ಟಿ ಪೊಂಬುಚ್ಚಪುರದ ಅರಸ ಲೋಕನಾಥ ದೇವನು ಶಿಶಿಲಕ್ಕೆ ಬಂದು ಅರಮನೆ ಕಟ್ಟಿಸಿ ವಾಸವಾಗಿದ್ದನೆಂದೂ ಬಳಿಕ ಅವನು ಇಲ್ಲಿಂದ ಕಾರ್ಕಳಕ್ಕೆ ತನ್ನ ರಾಜಧಾನಿಯನ್ನು ಸ್ಥಳಾಂತರ ಮಾಡಿದನೆಂದೂ ಹಿರಿಯಂಗಡಿಯ ಒಂದು ಶಾಸನದ ಬರಹದಲ್ಲಿ ನಿರೂಪಿಸಲಾಗಿದೆ. ಅನಂತರ ಅವನ ಉತ್ತರಾಧಿಕಾರಿಗಳು ಕಾರ್ಕಳದಲ್ಲಿಯೇ ವಾಸಿಸಿ ತಮ್ಮ ರಾಜ್ಯವನ್ನು ಪಾಲಿಸಿದರು. ಅವರ ಸಂಬಂಧಿಗಳಾದ ಮೂಲವಂಶದ ಅರಸರಿಗೆ ಶಿಶಿಲದ ಅಧಿಕಾರವು ಪ್ರಾಪ್ತಿಯಾಯಿತು. ಈ ವಂಶದ ಒಂದು ಶಾಖೆಯ ಅರಸರು ಶಿಸಿಲದಲ್ಲಿಯೂ ಬೇರೊಂದು ಶಾಖೆಯ ರಾಜರು ಬಯಲಂಗಡಿಯಲ್ಲಿಯೂ ನೆಲಸಿದ್ದರು. ಶಿಶಿಲದ ಅರಸರು ನೆರೆಹೊರೆಯ ಆರು ಮಾಗಣೆಗಳಿಗೂ ಬಯಲಂಗಡಿಯ ರಾಜರು ಆರು ಮಾಗಣೆಗಳಿಗೂ ಒಡೆಯರಾಗಿದ್ದರು. ಹೀಗೆ ಮೂಲವಂಶದ ಅರಸರಿಗೆ ಹನ್ನೆರಡು ಮಾಗಣೆಗಳ ಅಧಿಕಾರವಿತ್ತು. ಈ ರಾಜರು ಬೇರೆ ಬೇರೆ ಸ್ಥಳಗಳಲ್ಲಿ ವಾಸಿಸಿ ರಾಜ್ಯದ ಆಡಳಿತ ನಡೆಸುತ್ತಿದ್ದುದರಿಂದ ಕಡಬದ ಅರಸರ ಮತ್ತು ಬಂಗಾದಿ ಜೈನರಾಜರ ಆಕ್ರಮಣವನ್ನು ತಡೆಗಟ್ಟಲು ಅನುಕೂಲವಾಗುತ್ತಿತ್ತು.

ಶ್ರೀ ಶಿಶಿಲೇಶ್ವರ ದೇವಾಲಯದಿಂದ ಪಶ್ಚಿಮಕ್ಕೆ ಸುಮಾರು ಎರಡು ಕಿಲೋ ಮೀಟರ್ ದೂರದಲ್ಲಿ ಕಪಿಲಾನದಿ ತೀರದ ಕೋಟೆಬಾಗಿಲು ಪ್ರದೇಶದಲ್ಲಿ ಮೂಲ ಅರಸರ ಭವ್ಯವಾದ ಅರಮನೆ ವಿರಾಜಿಸುತ್ತಿತ್ತು. ಇದರ ಸುತ್ತಲೂ ಬಲವಾದ ಮೂರು ಸುತ್ತಿನ ಕೋಟೆ ಬಳಸಿಕೊಂಡಿತ್ತು. ಇದರ ಪರಿಸರದಲ್ಲಿ ಶಿಲಾಮಯವಾದ ಹಲವು ಬಸದಿಗಳಿದ್ದುವು. ಈ ಪ್ರದೇಶದ ಸಮೀಪದಲ್ಲಿ ಪರಾರಿ ಗುತ್ತು ಎಂಬ ಸ್ಥಳಗಳಿರುವುದರಿಂದ ಇಲ್ಲಿ ಜೈನ ಮುಖಂಡರು ವಾಸಿಸುತ್ತಿದ್ದರೆಂದು ಸ್ಪಷ್ಟವಾಗುತ್ತದೆ. ಶ್ರೀ ಶಿಶಿಲೇಶ್ವರ ದೇವಾಲಯದ

ರಥವೀಥಿಯಲ್ಲಿ ಬಂಗರ ಕಟ್ಟೆಯಿರುವುದರಿಂದ ಬಂಗವಂಶಜರಿದ್ದರೆಂದು ಎಣಿಸಬಹುದು. ಶಿಶಿಲದಲ್ಲಿ ಉಮ್ಮಣತಿಮಾರು ಎಂಬ ವಿಶಾಲ ಸ್ಥಳವಿರುವುದರಿಂದ ಉಮ್ಮಣನೆಂಬ ಜೈನ ನೇತಾರನಿದ್ದನೆಂದು ಗ್ರಹಿಸಬಹುದು. ಶಿಶಿಲದ ಅರಣ್ಯ ವಲಯದಲ್ಲಿ ಸೆಟ್ಟಿಕಂಡವೆಂಬ ಪ್ರದೇಶವಿರುವುದರಿಂದ ಇಲ್ಲಿ ಜೈನ ಸೆಟ್ಟಿಯವರು ವಾಸ ಮಾಡುತ್ತಿದ್ದರೆಂದು ಭಾವಿಸಬಹುದು. ಪ್ರಾಚೀನ ಕಾಲದಿಂದ ಇಂದಿನವರೆಗೂ ಶ್ರೀ ಶಿಶಿಲೇಶ್ವರ ದೇವಾಲಯದ ಪೂಜೋತ್ಸವಾದಿ ಕಾರ್ಯಗಳಲ್ಲಿ ವಿವಿಧ ಜಾತಿಯ ವ್ಯಕ್ತಿಗಳು ಭಾಗವಹಿಸುವ ಸಂಪ್ರದಾಯವು ಕಂಡು ಬರುತ್ತದೆ. ಆದುದರಿಂದ ಶಿಶಿಲದಲ್ಲಿ ಬ್ರಾಹ್ಮಣ – ಜೈನ – ಆಚಾರಿ– ಪದಾರ್ಥಿ – ಮಡಿವಳ – ಕ್ಷೌರಿಕ – ಗೌಡ – ಮಲೆಕುಡಿಯ – ಬಿಲ್ಲವ – ಮೇರ – ಪರವ – ನಲಿಕೆ ಮುಂತಾದ ಜಾತಿಯ ಜನ ಸಮುದಾಯವಿತ್ತೆಂದು ವ್ಯಕ್ತವಾಗುತ್ತದೆ. ಸಕಲ ಧರ್ಮ ಪರಿಪೋಷಕರಾದ ಶಿಶಿಲದ ಅರಸರ ಕಾಲದಲ್ಲಿ ಶ್ರೀ ಶಿಶಿಲೇಶ್ವರ ದೇವಾಲಯವು ಕಗ್ಗಲ್ಲಿನಿಂದ ಪುನರ್ನಿರ್ಮಾಣಗೊಂಡಿತು. ಶಿಶಿಲದ ಕೋಟೆಕಾರು ಎಂಬಲ್ಲಿ ನಗರ ರಕ್ಷಣೆಗಾಗಿ ಮತ್ತೊಂದು ಕೋಟೆಯನ್ನು ರಚಿಸಲಾಗಿತ್ತು. ಶಿಶಿಲ ಸೀಮೆಯ ನೆರೆಯ ಗ್ರಾಮಗಳಲ್ಲಿಯೂ ಬಲವಾದ ಕೋಟೆಗಳನ್ನು ನಿರ್ಮಿಸಲಾಗಿತ್ತು. ಪ್ರಾಚೀನ ಕಾಲದಿಂದಲೇ ಮೂಡುಗೆರೆಗೂ ತುಳುನಾಡಿಗೂ ಸಂಪರ್ಕವನ್ನು ಕಲ್ಪಿಸುವ ಹೆದ್ದಾರಿ ಶಿಶಿಲದಿಂದ ಹಾದು ಹೋಗುತ್ತಿತ್ತು. ಆದುದರಿಂದ ಈ ಮಾರ್ಗದಲ್ಲಿ ಹೇರೆತ್ತುಗಳ ಮೇಲೆ ಸಾಮಗ್ರಿಯನ್ನು ಹೇರಿ ಸಾಗಿಸುತ್ತಿದ್ದ ವ್ಯಾಪಾರಿಗಳು ಶಿಶಿಲದ ಹೇರ್ಕೆ (ಪೇರ್ಕೆ) ಎಂಬಲ್ಲಿ ತಂಗುತ್ತಿದ್ದರು. ಶ್ರೀ ಶಿಶಿಲೇಶ್ವರ ದೇವಸ್ಥಾನದ ತೇರ ಬೀದಿಯಲ್ಲಿಯೂ ಹತ್ತಿರದ ಬಸದಿಯ ಇದುರಿನ ಅಂಗಡಿತಿಮಾರು ಎಂಬ ಪ್ರದೇಶದಲ್ಲಿಯೂ ಹಿಂದೆ ಹಲವು ಅಂಗಡಿಗಳಿದ್ದು ವ್ಯಾಪಾರ ವ್ಯವಹಾರವು ಚೆನ್ನಾಗಿ ನಡೆಯುತ್ತಿತ್ತು. ಆಗ ಶಿಶಿಲವು ಜೈನ ರಾಜರ ರಾಜಧಾನಿಯಾದ ಹಿಂದುಗಳ ಮತ್ತು ಜೈನರ ಯಾತ್ರಾ ಕ್ಷೇತ್ರವೂ ಪ್ರಸಿದ್ಧ ವ್ಯಾಪಾರ ಕೇಂದ್ರವೂ ಆಗಿ ಬಹಳ ವೈಭವದಿಂದ ವಿಜೃಂಭಿಸುತ್ತಿತ್ತು.

ಕ್ರಿಸ್ತಶಕ 1538ರಲ್ಲಿ ಬರೆಯಲಾದ ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯಂಗಡಿಯ ಹಿರೇನೇಮಿಶ್ವರ ಬಸದಿಯ ಒಂದು ಶಾಸನದಲ್ಲಿ ಶಿಶಿಲದ ಅರ

ಸನ ಉಲ್ಲೇಖವಿದೆ:— "ವಿಳಂಬಿ ಸಂವತ್ಸರದ ಭಾದ್ರಪದ ಬಹುಳ ದಶ ಮಿಯು ಗುರುವಾರದಲ್ಲು ಶ್ರೀಮಂತು ಅರಿರಾಯರಗಂಡ ದಾವಣಿ ಶ್ರೀ ವೀರ ಭೈರರಸ ವೊಡೇರ ಕುಮಾರ ಭೈರರಸ ವೊಡೇರು, ಕೋಲ ಬಳಿ ಅಯಿದು ಸಾವಿರಾಳಿಗೂ ಮಲಹ ಅಯಿದು ಸಾವಿರಾಳಿಗೂ ಪಾಲಿಸ್ತ ಕಟ್ಟಿನ ನಿರೂಪದ ಕ್ರಮವೆಂತೆದರೆ [ ] ಕಾವ ಹೆಗ್ಗಡೆಗೆ ಕೊಟ್ಟ ನಂಬಿಗೆ—ಮನುಷ್ಯ ದೋಷ ದಿಂದ ಕಾವ ಹೆಗ್ಗಡೆ ವೊನಿವೊಗಲಾಗಿ ಕೋಲ ಬಳಿಯ ಅಯಿದು ಸಾವಿರಾಳು ಭೀತಿಯುಸ್ತರಾಗಿ [ತೊಲಗ] ಲಾಗಿ ಪಟ್ಟದ ಗುರುಗಳು ಜೆಉಟರು. ಅಜಿಲರು ನಾಡು ಬಳಿ ಅಯಿದು ಸಾವಿರಾಳು ದೇಸಿಂಗರಸರು ಶಿಶಿಲದರಸರು ಹಲರು ಮಾಡಿದ ಮಧ್ಯಸ್ತದ ವಿವರ......? "ಎಂದು ಮುಂತಾಗಿ ವಿವರಿಸುವ ಒಕ್ಕಣೆ ಈ ಶಾಸನದಲ್ಲಿ ಕಾಣುತ್ತದೆ. ಆದರೆ ಈ ನಿರೂಪದಲ್ಲಿ ಶಿಶಿಲದ ಅರಸನ ಹೆಸ ರನ್ನು ಸೂಚಿಸಲಿಲ್ಲ. ಅವನಿಗೆ ಉಮ್ಮಣಮೂಲ ಅರಸನೆಂಬ ಪಟ್ಟದ ನಾಮಧೇಯವಿತ್ತೆಂದು ಬೇರೆ ಹೇಳಿಕೆಗಳಿಂದ ತಿಳಿಯುತ್ತದೆ. ಹೇಗಿದ್ದರೂ ಆ ಕಾಲದಲ್ಲಿ ಜೈನ ಮತದ ಅರಸನು ಶಿಶಿಲದಲ್ಲಿ ಇದ್ದನೆಂದು ನಿರ್ವಿವಾದವಾಗಿ ನಿರ್ಧರಿಸಬಹುದು. ಈ ರಾಜ ಸಂತತಿಯ ವಿವರವು ಈ ವರೆಗೆ ಪ್ರಕಟವಾಗಿರು ವುದಿಲ್ಲ. ಹಿಂದೆ ಶಿಶಿಲದಲ್ಲಿ ಸ್ಥಾಪಿಸಿರಬಹುದಾದ ಶಿಲಾ ಶಾಸನಗಳನ್ನು ತಿಳಿ ಗೇಡಿಗಳು ಅಪಹರಿಸಿ ತಮ್ಮ ಗೃಹೋಪಯೋಗಕ್ಕೆ ಬಳಸಿರುವುದರಿಂದ ಅನೇಕ ಶಾಸನಗಳು ನಷ್ಟವಾಗಿವೆ. ಕೋಟೆ ಬಾಗಿಲು ಪ್ರದೇಶದಲ್ಲಿ ನೆಲವನ್ನು ಅಗೆದರೆ ಮಣ್ಣಿನಡಿಯಲ್ಲಿ ಹೂತು ಹೋದ ಕೆಲವು ಶಿಲಾ ಶಾಸನಗಳು ಸಿಗುವ ಸಾಧ್ಯತೆಯಿದೆ. ಈ ವರೆಗೆ ಶಿಶಿಲದಲ್ಲಿ ಯಾವ ಶಾಸನವೂ ಲಭಿಸದಿರುವುದ ರಿಂದ ನಿಜವಾದ ಇತಿಹಾಸವನ್ನು ಅರಿಯಲು ಅವಕಾಶವಿಲ್ಲದಂತಾಗಿದೆ.

ಮೂಲವಂಶದ ಉಭಯಶಾಖೆಯ ಅರಸರು ಶಿಶಿಲದಲ್ಲಿಯೂ ಬಯ ಲಂಗಡಿಯಲ್ಲಿಯೂ ವಾಸಿಸುತ್ತಿದ್ದು ಅನೇಕ ವರ್ಷಗಳವರೆಗೆ ರಾಜ್ಯವನ್ನು ಪರಿ ಪಾಲಿಸಿದರು. ಕಾಲಾಂತರದಲ್ಲಿ ಶಿಶಿಲದಲ್ಲಿ ನೆಲಸಿದ್ದ ರಾಜಸಂತತಿ ಕ್ಷಯಿಸಲು ಇವರ ವಶದಲ್ಲಿದ್ದ ಗ್ರಾಮಗಳು ಸ್ವಾಭಾವಿಕವಾಗಿ ಬಯಲಂಗಡಿಯ ಮೂಲ ವಂಶದ ಅರಸರ ಅಧೀನವಾದುವು. ಆದುದರಿಂದ ಶಿಶಿಲದ ರಾಜ ವೈಭವವು ಕುಂದಿತು. ಅರಮನೆ ನಾಶವಾಯಿತು. ಅರಣ್ಯವು ಬೆಳೆಯಿತು.

ಅನಂತರ ಬಯಲಂಗಡಿಯ ಅರಸರ ಸ್ವಾಧೀನದಲ್ಲಿದ್ದ ಕೆಲವು ಗ್ರಾಮಗಳು ಅನ್ಯರಾಜರ ವಶವಾಗಿ ಕೈತಪ್ಪಿ ಹೋದವು. ಆದರೆ ಚಾರ್ಮಾಡಿ - ಮುಂಡಾಜೆ - ಉಜಿರೆ - ಲಾಯಿಲ - ಮುಂಡೂರು - ಪಡಂಗಾಡಿ-ಗರಡಾಡಿ- ಸೋಣಂದೂರು - ಮಾಲಾಡಿ - ಕಲ್ಮಡ್ಕ - ತೋಟತಾಡಿ - ನೆರಿಯ - ಧರ್ಮಸ್ಥಳ - ಚಿಬಿದ್ರೆ - ಪುದುವೆಟ್ಟು - ಕಳೆಂಜ - ಪಟ್ರಮೆ - ನಿಡ್ಲೆ ಕೊಕ್ಕಡ - ಕೌಕ್ರಾಡಿ - ಹತ್ತಿಯಡ್ಕ - ರೆಕ್ಯ - ಶಿಬಾಜೆ - ಶಿರಾಡಿ - ಶಿಶಿಲ ಮುಂತಾದ ಗ್ರಾಮಗಳು ಇವರ ಅಧೀನದಲ್ಲಿ ಉಳಿದಿದ್ದುವು.

※

ಕ್ರಿಸ್ತಶಕ ಹದಿನಾಲ್ಕನೆಯ ಶತಾಬ್ದದಲ್ಲಿ ಜಗತ್ಪ್ರಸಿದ್ಧ ಸಾಮ್ರಾಜ್ಯವನ್ನು ಸ್ಥಾಪಿಸಿ ಮೆರೆದ ವಿಜಯನಗರದ ಚಕ್ರವರ್ತಿಗಳ ಕಾಲದಲ್ಲಿ ತುಳುನಾಡು ಅವರ ವಶವಾಯಿತು. ಆಗ ಮಂಗಳೂರು ಬಾರಕೂರುಗಳಲ್ಲಿ ವಿಜಯನಗರದ ಸಾರ್ವಭೌಮರ ಅಧೀನದಲ್ಲಿ ರಾಜ್ಯಪಾಲರುಗಳು ಆಡಳಿತ ನಡೆಯಿಸುತ್ತಿದ್ದರು ಆ ಸಮಯದಲ್ಲಿ ತುಳುನಾಡಿನ ಎಲ್ಲಾ ಅರಸರೂ ಅವರ ಸಾಮಂತರಾಗಿದ್ದರು.

ಕ್ರಿಸ್ತಶಕ ಹದಿನೈದನೆಯ ಶತಾಬ್ದದ ಅಂತ್ಯಭಾಗದಲ್ಲಿ ವಿಜಯನಗರದ ರಾಜನಾದ ಸದಾಶಿವರಾಯನು ತುಳುನಾಡಿನ ಅಧಿಕಾರವನ್ನು ಕೆಳದಿಯ ಸದಾಶಿವನಾಯಕನಿಗೆ ಬಿಟ್ಟುಕೊಟ್ಟನು. ಈ ವಂಶದ ಒಂದನೆಯ ವೆಂಕಟಪ್ಪ ನಾಯಕನು ತುಳುನಾಡಿನ ಎಲ್ಲಾರಾಜರನ್ನು ಗೆದ್ದು ಕೆಲವು ಅರಸರ ಭೂಭಾಗವನ್ನು ವಶಪಡಿಸಿಕೊಂಡನು. ಅವನು ತನ್ನ ರಾಜ್ಯದ ರಕ್ಷಣೆಗಾಗಿ ಅನೇಕ ಸ್ಥಳಗಳಲ್ಲಿ ಕೋಟೆಗಳನ್ನು ಕಟ್ಟಿಸಿದನು. ಕ್ರಿಸ್ತಶಕ ೧೬೦೮ನೆಯ ವರ್ಷದಲ್ಲಿ ಈ ಒಂದನೆಯ ವೆಂಕಟಪ್ಪ ನಾಯಕನು ಶಿಶಿಲದಲ್ಲಿಶಿಥಿಲವಾಗಿದ್ದ ಹಿಂದಿನ ಕೋಟೆಗಳನ್ನು ಪುನರ್ನಿರ್ಮಾಣ ಮಾಡಿದನು. ಈ ವಿಷಯವನ್ನು ಲಿಂಗಣ್ಣಕವಿ ಕೆಳದಿ ನೃಪವಿಜಯದಲ್ಲಿ ವರ್ಣಿಸಿರುವನು. ಅನಂತರ ತುಳುನಾಡಿನಲ್ಲಿ ಜೈನ ರಾಜರ ಪ್ರಭಾವವು ಕುಗ್ಗಿತು.

* * * * *

ಕೆಳದಿಯ ವೀರಭದ್ರಪ್ಪ ನಾಯಕನು ವೀರನರಸಿಂಹ ಶಂಕರದೇವಿ ಬಂಗಳಿಗೆ ಕ್ರಿಸ್ತಶಕ ೧೬೪೨ನೆಯ(ಶಾಲಿವಾಹನಶಕ೧೫೬೪ನೆಯ) ವರ್ಷದ ವಿಷುಸಂವ

ತ್ಸರದ ಫಾಲ್ಗುಣ ಶುದ್ಧ ದಶಮಿಯಲ್ಲಿ ಬರೆದು ಕಳುಹಿದ ಒಡಂಬಡಿಕೆಯ ಪತ್ರದಲ್ಲಿ ಕೆಲವು ಗ್ರಾಮಗಳ ಆದಾಯವನ್ನು ಉಂಬಳಿ ಕೊಟ್ಟ ವಿವರವಿದೆ. ಇದರಲ್ಲಿ ಶಿಶಿಲ ಹೋಬಳಿಯನ್ನು ಗಡಿಯಾಗಿ ಸೂಚಿಸಲಾಗಿದೆ. ಆದುದರಿಂದ ಶಿಶಿಲವು ಹೋಬಳಿಯ ಮುಖ್ಯ ಪಟ್ಟಣವಾಗಿತ್ತೆಂದು ಖಚಿತವಾಗುತ್ತದೆ.

೬

ಕ್ರಿಸ್ತಶಕ ೧೭೬೩ನೆಯ ವರ್ಷದಲ್ಲಿ ಕೆಳದಿ ನಾಯಕರ ರಾಜ್ಯವನ್ನು ಹೈದರಾಲಿ ವಶಪಡಿಸಿದುದರಿಂದ ತುಳುನಾಡು ಅವನ ಅಧೀನವಾಯಿತು. ಆತನ ಅನಂತರ ಪಟ್ಟವೇರಿದ ಟಿಪ್ಪುಸುಲ್ತಾನನನ್ನು ಇಂಗ್ಲಿಷರು ಶ್ರೀರಂಗಪಟ್ಟಣದಲ್ಲಿ ಕ್ರಿಸ್ತಶಕ ೧೭೯೯ನೆಯ ವರ್ಷದಲ್ಲಿ ಕೊಂದು ಕರ್ಣಾಟಕವನ್ನು ವಶಪಡಿಸಿಕೊಂಡರು. ಇಂಗ್ಲಿಷರು ಸ್ವಾಧೀನಪಡಿಸಿದ ತುಳುನಾಡಿನ ಕೆಲವು ಸ್ಥಳಗಳನ್ನು ಟಿಪ್ಪು ಸುಲ್ತಾನನ ಅನುಯಾಯಿಗಳು ಮರಳಿ ಪಡೆಯಲು ಹೆಣಗಾಡಿದರು. ಟಿಪ್ಪುವಿನ ಉಪಪತ್ನಿಯ ಮಗನೆಂದು ಹೇಳುತ್ತಿದ್ದ ಫಟೆಹೈದರನು ಕಣ್ಣಾನೂರಿನ ಕೆಲವು ಮುಸ್ಲಿಮರನ್ನು ಕೂಡಿಸಿ ತುಳುನಾಡಿಗೆ ಬಂದನು. ಆ ಸಮಯದಲ್ಲಿ ಬೇಕಲ ಕೋಟೆಯಲ್ಲಿ ದಳಪತಿಯಾಗಿದ್ದ ತಿಮ್ಮನಾಯಕನು ಇನ್ನೂರು ಮಂದಿ ಭಟರನ್ನು ಕೂಡಿಕೊಂಡು ಬೆಳತಂಗಡಿ ಸಮೀಪದ ಜಮಲಾಬಾದ್ ಕೋಟೆಯ ಬಳಿಗೆ ಹೊರಟನು. ಕೊಯಮುತ್ತೂರಿನಲ್ಲಿ ಟಿಪ್ಪುವಿನ ಕರಣಿಕನಾಗಿದ್ದ ಪತ್ತುಮುಡಿ ಸುಬ್ರಾಯನು ಕೆಲವು ಸಹಚರರೊಡನೆ ತುಳುನಾಡನ್ನು ಪ್ರವೇಶಿಸಿದನು. ಈ ಸುಬ್ರಾಯನೂ ಅನುಯಾಯಿಗಳೂ ಮುಂಬರಿದು ಉಪ್ಪಿನಂಗಡಿಗೆ ಬಂದು ಅಲ್ಲಿ ಕಡಬದ ತಹಶಿಲ್ದಾರನಿಗೆ ಭೂಕಂದಾಯದ ಹಣವನ್ನು ಒಪ್ಪಿಸಲು ಸೇರಿದ್ದ ಪಟೇಲರುಗಳನ್ನು, ತಹಶಿಲ್ದಾರನನ್ನು ಬೆನ್ನಟ್ಟಿ ಓಡಿಸಿದರು. ಮತ್ತೆ ಅವರು ಬಂಟವಾಳಕ್ಕೂ ಪುತ್ತೂರಿಗೂ ಹೋಗಿ ಪಟೇಲರುಗಳಿಂದ ಭೂಕಂದಾಯದ ಹಣವನ್ನು ಸೆಳೆದುಕೊಂಡರು. ಆಗ ದಕ್ಷಿಣ ಕನ್ನಡ ಜಿಲ್ಲೆಯ ಕಲೆಕ್ಟರನಾಗಿದ್ದ ಕೇಪ್ಟನ್ ಮುನ್ರೋವಿನ ಆದೇಶದಂತೆ ಕಡಬದ ತಹಶಿಲ್ದಾರನ ಮುಖಂಡತ್ವದಲ್ಲಿ ಇನ್ನೂರು ಮಂದಿ ಇಂಗ್ಲಿಷ್ ಸೈನಿಕರು ಬಂದು ಅವರನ್ನು ಇದುರಿಸಿದರು. ಈ ಕಾಳಗದಲ್ಲಿ ಊರಿನ ಜನತೆ ಸುಬ್ರಾಯನಿಗೆ ಸಹಕಾರ ನೀಡ

ದಿದ್ದುದರಿಂದ ಸುಬ್ರಾಯನೂ ಅವನ ಸಹಚರರೂ ನಿರ್ವಾಹವಿಲ್ಲದೆ ಹಿಂಜರಿಯ ಬೇಕಾಯಿತು. ಸುಬ್ರಾಯನು ಕ್ರಿಸ್ತಶಕ ೧೮೦೦ನೆಯ ವರ್ಷದ ಮೇ ತಿಂಗಳಲ್ಲಿ ಶಿಶಿಲಕ್ಕೆ ಬಂದು ಆಶ್ರಯ ಪಡೆದನು. ಇಲ್ಲಿ ಅವನು ದೇಶೀಯ ವೀರರನ್ನು ಒಂದುಗೂಡಿಸಿ ಸೇನಾಸಂಗ್ರಹ ಮಾಡಲು ಪ್ರಯತ್ನಿಸಿದನು.

ಆ ಕಾಲದಲ್ಲಿ ಜಮಲಾಬಾದ್ ಕೋಟೆಯ ಬುಡದಲ್ಲಿ ಇಂಗ್ಲಿಷ್ ಸೈನಿಕರು ತಳವೂರಿದ್ದರು. ಅಲ್ಲಿಗೆ ಫಟೆಹೈದರನೂ ತಿಮ್ಮನಾಯಕನೂ ಟಿಪ್ಪು ಸುಲ್ತಾನನ ಸೈನಿಕರೂ ಬಂದು ಕಾವಲಿದ್ದ ಕೆಲವು ಇಂಗ್ಲಿಷ್ ಸೈನಿಕರನ್ನು ಕೊಂದು ಕೋಟೆಯನ್ನು ಏರಿ ತಂಗಿದರು.

ಆಗ ಶಿಶಿಲದಲ್ಲಿ ಇದ್ದ ಸುಬ್ರಾಯನು ಉಗ್ಗೆಹಳ್ಳಿಗೆ ಹೋಗಿ ಅಲ್ಲಿನ ಪಾಳೆಯಗಾರರ ಸಹಾಯ ಪಡೆದು ಕೆಲವು ಯೋಧರನ್ನು ಒಂದುಗೂಡಿಸಿದನು. ಐಗೂರು ಕೃಷ್ಣಪ್ಪನಾಯಕನು ಕೆಲವು ಸೈನಿಕರನ್ನು ಅವನೊಡನೆ ಬೆಂಬಲವಾಗಿ ಕಳುಹಿದನು. ಈ ಸುಬ್ರಾಯನೂ ದೇಶೀಯ ಯೋಧರೂ ಮತ್ತೆ ಜಮಲಾಬಾದ್ ಕೋಟೆಯ ಬಳಿಗೆ ಬಂದು ಸೇರಿದರು. ಆಗ ಅಲ್ಲಿಗೆ ಕಡಬದ ತಹಶಿಲ್ದಾರನ ನೇತೃತ್ವದಲ್ಲಿ ಏಳುನೂರು ಇಂಗ್ಲಿಷ್ ಸೈನಿಕರು ಬಂದು ಮುತ್ತಿದರು. ಊರಿನ ಮುಖಂಡರು ಇಂಗ್ಲಿಷರಿಗೆ ಸಹಾಯ ಮಾಡಿದುದರಿಂದ ಈ ಯುದ್ಧದಲ್ಲಿ ದೇಶೀಯ ಸೇನೆಗೆ ಅಪಜಯವಾಯಿತು. ಇಂಗ್ಲಿಷ್ ಸೈನಿಕರು ಸುಬ್ರಾಯನನ್ನೂ ಅನೇಕ ಯೋಧರನ್ನೂ ಕೊಂದರು. ಫಟೆಹೈದರನೂ ತಿಮ್ಮನಾಯಕನೂ ಅಳಿದುಳಿದ ಕೆಲವು ಭಟರೂ ಅಲ್ಲಿಂದ ಹಿಂಜರಿದು ಬೇರೆ ಕಡೆಗೆ ತೆರಳಿದರು. ಇಂಗ್ಲಿಷರು ಬಹಳ ಪ್ರಯತ್ನದಿಂದ ಜಮಲಾಬಾದ್ ಕೋಟೆಯನ್ನು ವಶಪಡಿಸಿಕೊಂಡರು. ಕೊನೆಗೆ ಫಟೆಹೈದರನು ಇಂಗ್ಲಿಷರಿಗೆ ಶರಣಾಗತನಾದನು. ಇಂಗ್ಲಿಷರು ತಿಮ್ಮನಾಯಕನನ್ನು ಉಪಾಯದಿಂದ ಸೆರೆಹಿಡಿದು ಬೇಕಲ (ದೇಕಲ) ಕೋಟೆಯಲ್ಲಿ ಗಲ್ಲಿಗೇರಿಸಿದರು. ಹೀಗೆಯೇ ಅನೇಕ ದೇಶೀಯ ವೀರರನ್ನು ನಿಷ್ಕರುಣೆಯಿಂದ ಅವರು ವಧಿಸಿದರು ವಿದೇಶೀಯರಾದ ಇಂಗ್ಲಿಷರು ಭಾರತದೇಶದ ಎಲ್ಲಾ ರಾಜರನ್ನು ಭೇದೋಪಾಯದಿಂದ ಸೋಲಿಸಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು. ಶಿಶಿಲದಲ್ಲಿ ಆಶ್ರಯಪಡೆದು ಸೇನಾ

ಸಂಗ್ರಹ ಮಾಡಿ ಇಂಗ್ಲಿಷರನ್ನು ಪರಾಕ್ರಮದಿಂದ ಇದುರಿಸಿ ತಾಯ್ನಾಡಿನ ಸ್ವಾತಂತ್ರ್ಯಕಾಗಿ ಪ್ರಾಣಾರ್ಪಣೆ ಮಾಡಿದ ತುಳು ನಾಡಿನ ಪತ್ತುಮುಡಿಯ ಸುಬ್ರಾಯನನ್ನು ಒಬ್ಬ ಸ್ವಾತಂತ್ರ್ಯ ಸಂಗ್ರಾಮ ವೀರನೆಂದು ಸ್ಮರಿಸಿ ಗೌರವಿಸ ಬೇಕಾಗಿದೆ.

* * * *

ಶ್ರೀರಂಗ ಪಟ್ಟಣದಲ್ಲಿ ಇಂಗ್ಲಿಷರಿಗೂ ಟಿಪ್ಪುವಿಗೂ ನಡೆದ ಸಂಗ್ರಾಮದ ಸಮಯದಲ್ಲಿ ಕೊಡಗಿನ ದೊರೆ ವೀರರಾಜೇಂದ್ರ ಒಡೆಯನು ಆಂಗ್ಲ ಕುಂಪೆನಿ ಸರಕಾರದ ಸೇನೆಗೆ ಸಹಾಯ ಮಾಡಿದ್ದನು. ಅದಕ್ಕಾಗಿ ಬಂಗಾಳದ ಗವರ್ನರ್ ಜನರಲ್ ಮಾರ್ಕ್ವಿಸ್ ವೆಲ್ಲೆಸ್ಲಿಯ ಆದೇಶ ಪ್ರಕಾರ ಮಂಗಳೂರು ಕಲೆಕ್ಟರ್ ಜೋನ್‌ರೆವಿನ್‌ಶಾ ಸಾಹೇಬನು ಕ್ರಿಸ್ತಶಕ ೧೮೦೪ನೆಯ(ಫಸಲಿಶಕ ೧೨೧೪ನೆಯ) ವರ್ಷದ ರಕ್ತಾಕ್ಷಿ ಸಂವತ್ಸರದಲ್ಲಿ ಕೊಡಗು ಸಂಸ್ಥಾನಕ್ಕೆ ಬಿಟ್ಟುಕೊಟ್ಟ ಕೆಲವು ಪ್ರದೇಶಗಳಲ್ಲಿ ಶಿಶಿಲ ಮಾಗಣೆಯ ಅರಿಗುಡಿ ಗ್ರಾಮವೂ ಸೇರಿದೆ. ಆದುದರಿಂದ ಆ ಕಾಲದಲ್ಲಿಯೂ ಶಿಶಿಲವು ಮಾಗಣೆಯ ಕೇಂದ್ರ ಸ್ಥಳವಾಗಿತ್ತೆಂದು ಸ್ಪಷ್ಟವಾ ಗುತ್ತದೆ.

* * * *

ಹಿಂದೆ ನಗರವಾಗಿದ್ದ ಶಿಶಿಲವು ಈಗ ಒಂದು ಸಣ್ಣ ಗ್ರಾಮವಾಗಿದೆ. ಈ ಊರಿನ ಕೋಟೆ ಬಾಗಿಲು ಪ್ರದೇಶದಲ್ಲಿ ಭಗ್ನಗೊಂಡ ಅರಮನೆ ಕೋಟೆಗಳ ಕುರುಹು ಗಳೂ ಬಸದಿಗಳ ಅವಶೇಷಗಳೂ ಅನೇಕ ಸಮಾಧಿಗಳೂ ಹಲವು ಮನೆಗಳ ನೆಲ ಗಟ್ಟುಗಳೂ ಕೆಸರುಕಸದಿಂದ ಮುಚ್ಚಿಹೋದ ಕೆರೆಬಾವಿಗಳೂ ಗೋಚರಿಸುತ್ತಿವೆ. ಶ್ರೀಶಿಶಿಲೇಶ್ವರ ದೇವಾಲಯದ ಹತ್ತಿರದಲ್ಲಿರುವ ಕೆಳಗಿನ ಹಿತ್ತಿಲು ತೋಟದಲ್ಲಿ ಈಗಲೂ ಒಂದು ಕಗ್ಗಲ್ಲಿನ ಬಸದಿ ಜೀರ್ಣಾವಸ್ಥೆಯಲ್ಲಿದೆ. ದೇವಾಲಯದಿಂದ ಸುಮಾರು ನಾಲ್ಕುಕಿಲೋಮೀಟರ್‌ದೂರದ ಕೋಟೆತಾರು ಎಂಬಲ್ಲಿ ಇನ್ನೊಂದು ಕೋಟೆಯ ಅವಶೇಷವಿದೆ. ಶಿಶಿಲ ಮತ್ತು ಶಿಬಾಜೆ ಗ್ರಾಮಗಳ ಗಡಿಯ ಬರ್ಗು ಳದಲ್ಲಿ ನಾಶಗೊಂಡ ಸುಬ್ರಹ್ಮಣ್ಯ ದೇವಾಲಯದ ನೆಲಗಟ್ಟು ಗೋಚರಿಸುತ್ತಿದೆ. ಶಿಶಿಲದಲ್ಲಿಯೂ ನೆರೆಯ ಗ್ರಾಮಗಳಲ್ಲಿಯೂ ಕೆಲವು ದೇವಾಲಯ-ಬಸದಿ-ಭೂತ

ಸ್ಥಾನಗಳ ಅವಶೇಷಗಳು ಲಭಿಸುತ್ತವೆ. ಅಮೆದಿಕಲ್ಲು ಮತ್ತು ಎತ್ತಿನ ಹಿಣಿಲು ಬೆಟ್ಟಗಳ ತಪ್ಪಲಿನಲ್ಲಿ ಹಿಂದೆ ಜನ ವಸತಿಯಿದ್ದ ಕುರುಹುಗಳಿವೆ. ಕನ್ನಿಕಯ-ಸೆಟ್ಟಿಕಂಡ - ಬರಂಗಾಯ - ಕಬ್ಬಿನಾಲೆ - ಸಾಯಿಹಳ್ಳ ಮುಂತಾದ ಸ್ಥಳಗಳಲ್ಲಿ ಬಿದ್ದುಹೋದ ಹಲವು ಮನೆಗಳ ಅಡಿಗಲ್ಲುಗಳು ಕಾಣುತ್ತಿವೆ. ಕೂವೆಕೆರೆ(ಕಾಡು ಕೆರೆ)ಯ ಸಮೀಪದಲ್ಲಿ ಹಿಂದೆ ಕೃಷಿಗಾಗಿ ನಿರ್ಮಿಸಿದ ಕಾಲುವೆಗಳಿವೆ. ಆದುದ ರಿಂದ ಈ ಪ್ರದೇಶಗಳಲ್ಲಿ ಬಹಳ ಜನ ಸಮುದಾಯವು ವಾಸ ಮಾಡುತ್ತಿತ್ತೆಂದು ಖಚಿತವಾಗುತ್ತದೆ. ಪ್ರಾಚೀನ ಇತಿಹಾಸವನ್ನು ಅವಲೋಕಿಸಿದರೆ ಹಿಂದೆ ಶಿಶಿಲವು ಸಂಪ್ರಸಿದ್ಧ ಸ್ಥಳವಾಗಿತ್ತೆಂದು ವ್ಯಕ್ತವಾಗುವುದು.

* * * *

ಶಿಶಿಲ ಗ್ರಾಮವು ಶ್ರೀ ಶಿಶಿಲೇಶ್ವರ ದೇವಾಲಯವಿರುವ ದಿವ್ಯಕ್ಷೇತ್ರ; ವಿಸ್ತಾರವಾದ ವನರಾಜಿಯಿಂದ ಪರಿಶೋಭಿಸುವ ಶೈಲಶ್ರೇಣಿಯ ಉಪತ್ಯಕ ಪ್ರಾಂತ್ಯ; ಪವಿತ್ರವಾದ ಕಪಿಲಾನದಿ ಪ್ರವಹಿಸುವ ನದೀ ಮಾತೃಕ ಭೂಮಿ; ನಾನಾ ವಿಧದ ಕೃಷಿ ವ್ಯವಸಾಯಕ್ಕೆ ಅನುಕೂಲಕರವಾದ ಸಸ್ಯ ಶ್ಯಾಮಲ ಪ್ರದೇಶ; ಕರ್ಣಾಟಕದ ಪ್ರಥಮ ಸಮ್ರಾಟನೆನಿಸಿದ ಮಯೂರ ಶರ್ಮನು ನೆಲೆಗೊಂಡು ವಿಜಯಯಾತ್ರೆಯನ್ನು ಪ್ರಾರಂಭಿಸಿದ ಚಾರಿತ್ರಿಕ ಸ್ಥಳ; ಜಗದ್ವಿಖ್ಯಾತ ಪುರುಷರಾದ ಕದಂಬ ಮಹಾರಾಜರು ನೆಲಸಿದ ಪುರಾತನ ರಾಜಧಾನಿ ; ಸರ್ವ ಧರ್ಮ ಪರಿಪೋಷಕರಾದ ಜೈನ ಮತದ ಅರಸರು ವಾಸಿಸಿದ ಪ್ರಖ್ಯಾತ ನಗರ; ವಿದೇಶೀಯರಾದ ಇಂಗ್ಲಿಷರನ್ನು ಮೊತ್ತ ಮೊದಲಾಗಿ ವಿರೋಧಿಸಿದ ತುಳು ನಾಡಿನ ಸ್ವಾತಂತ್ರ್ಯಯೋಧ ಸುಬ್ರಾಯನು ಸೇನಾ ಸಂಗ್ರಹ ಮಾಡಿದ ರಹಸ್ಯಸ್ಥಾನ ; ಹೀಗೆ ಅತ್ಯಂತ ಮಹತ್ವ ಪೂರ್ಣವಾದ ಪೂರ್ವೇತಿಹಾಸವಿರುವ ವಿಶಿಷ್ಟ ನಿಸರ್ಗ ಸೌಂದರ್ಯದಿಂದ ರಂಜಿಸುವ ಶಿಶಿಲ ಗ್ರಾಮವು ಪ್ರವಾಸಿಗಳ ಮನಸ್ಸನ್ನು ಆಕರ್ಷಿಸಿ ಆಹ್ಲಾದ ನೀಡಬಹುದು.

—o—

ಅಭ್ಯಾಸ ಗ್ರಂಥ ಸೂಚಿ

೧. ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ–
[ಲೇಖಕರು:– ಎಸ್. ಗಣಪತಿ ರಾವ್ ಐಗಳವರು]

೨. ತುಳು ನಾಡಿನ ಇತಿಹಾಸ– [ಲೇಖಕರು:– ಡಾ. ಕೆ. ವಿ. ರಮೇಶರು]

೩. ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ–
[ಲೇಖಕರು:– ಪೊಳಲಿ ಅಮ್ಮುಣ್ಣಂಜೆಗುತ್ತು ಶೀನಪ್ಪ ಹೆಗ್ಡೆಯವರು.

೪. ಕರ್ಣಾಟಕದ ಗತ ವೈಭವ [ಲೇಖಕರು:– ಆಲೂರು ವೆಂಕಟ ರಾಯರು

೫. ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು–
[ಸಂಪಾದಕರು:– ಕುಶಾಲಪ್ಪ ಗೌಡರು– ಚಿನ್ನಪ್ಪ ಗೌಡರು]

೬. ಕೆಳದಿ ನೃಪ ವಿಜಯಂ [ಕವಿ:– ಲಿಂಗಣ್ಣ ಕವಿ]

೭. ಗ್ರಾಮ ಪದ್ಧತಿ.

೮. ರಾಜೇಂದ್ರ ನಾಮೆ.

೯. "ಕದಂಬ ತ್ರಿಪರ್ವತ ಯಾವುದು ?"–
ಉದಯವಾಣಿಯ ಲೇಖನ, 9–10–1986
[ಲೇಖಕರು:– ಡಾ। ಪಿ. ಯನ್. ನರಸಿಂಹ ಮೂರ್ತಿಯವರು]

೧೦. "ಕಾಡಿನ ಮಧ್ಯದಲ್ಲೊಂದು ಕಲ್ಲಿನ ಕೋಟೆ"–
ಉದಯವಾಣಿಯ ಲೇಖನ, 27–12–1987
[ಲೇಖಕರು:– ವೈ. ಉಮಾನಾಥ ಶೆಣ್ಯೆಯವರು.

೧೧. ಪೂರ್ವಿಕರ ಪರಂಪರಾಗತವಾದ ಹೇಳಿಕೆಗಳು.

೧೨. Corpus of Kadamba Inscriptions– by B. R. Gopal

೧೩. South Indian Inscriptions Volume VII

೧೪. Studies in Tuluva History and culture
by P. Gururaja Bhat

೧೫. Descriptive memoir of Shishila Village

—o—

ಅನುಬಂಧ

೧

ಮಯೂರ ಶರ್ಮನು ಕಾಂಚಿಯಿಂದ ಬಂದು ನೆಲಸಿದ ಶ್ರೀ ಪರ್ವತದ ಅರಣ್ಯ ಪ್ರದೇಶವು ಶಿಶಿಲವಾಗಿರಬಹುದೆಂದು ಈಗ ಅನೇಕ ಇತಿಹಾಸ ತಜ್ಞರು ಭಾವಿಸಿರುವರು. ಡಾ। ಕೆ. ವಿ. ರಮೇಶರೂ; ಡಾ। ಪಿ. ಎನ್. ನರಸಿಂಹ ಮೂರ್ತಿಯವರೂ; ಶ್ರೀ ವೈ. ಉಮಾನಾಥ ಶೆಣೈಯವರೂ ತಾಳ ಗುಂದದ ಶಿಲಾಶಾಸನದಲ್ಲಿ ಶ್ರೀಶೈಲದ (ಶಿಶಿಲದ) ಸಮಾನಾರ್ಥಪದವಾದ ಶ್ರೀಪರ್ವತವೆಂಬ ಹೆಸರನ್ನು ಪ್ರಯೋಗಿಸಿರಬಹುದೆಂದು ತಮ್ಮ ಪ್ರಬಂಧ ಲೇಖನಗಳಲ್ಲಿ ವಿವರಿಸಿರುವರು. ಶ್ರೀ ಬಿ. ರಾಜಶೇಖರಪ್ಪನವರು ಚಿತ್ರದುರ್ಗ ಜಿಲ್ಲೆಯ ಧವಳೇಶ್ವರ ಲಿಂಗವಿರುವ ಧವಳಪ್ಪನ ಗುಡ್ಡೆಯನ್ನು ಮಯೂರ ವರ್ಮನ ವನವಾಸದ ಶ್ರೀಪರ್ವತವಾಗಿರಬಹುದೆಂದು ನಿರೂಪಿಸಿರುವರು. ಇಲ್ಲಿಂದ ಸ್ವಲ್ಪದೂರದ ಚಂದ್ರವಳ್ಳಿಯಲ್ಲಿ ಮಯೂರ ವರ್ಮನು ಒಂದು ತಟಾಕವನ್ನು ನಿರ್ಮಿಸಿದನೆಂದು ಸೂಚಿಸುವ ಅಪೂರ್ಣ ವಾಕ್ಯದ ಶಿಲಾಶಾಸನ ವಿರುವುದರಿಂದಲೂ, ಧವಳಪ್ಪನ ಗುಡ್ಡೆಯ ಗುಹಾ ಮಾರ್ಗದ ಇದಿರಿನ ಬಂಡೆ ಗಲ್ಲಿನಲ್ಲಿ "ಸಿವಸಿರಿ ಕವುಳಾಸ" ಎಂದು ಬರೆದಿರುವುದರಿಂದಲೂ ಅದನ್ನು ಅವರು ಶ್ರೀಪರ್ವತವೆಂದು ಪ್ರತಿಪಾದಿಸಿರುವರು, ಆದರೆ ಮಯೂರವರ್ಮನಿಂದ ನಿರ್ಮಾಣಗೊಂಡ ತಟಾಕದ ಸಮೀಪದಲ್ಲಿರುವ ಬೆಟ್ಟವೆಂಬ ಕಾರಣದಿಂದ ಧವಳಪ್ಪನ ಗುಡ್ಡೆಯನ್ನು ಶ್ರೀ ಪರ್ವತವೆಂದು ಖಚಿತವಾಗಿ ನಿರ್ಧರಿಸುವಂತಿಲ್ಲ ತಾಳಗುಂದದ ಶಿಲಾಶಾಸನದಲ್ಲಿ ಶಿವನನ್ನು ಪ್ರಾರಂಭದಲ್ಲಿ ಸ್ತುತಿಸಿದ ಕುಬ್ಜಕವಿ ಧವಳಪ್ಪನ ಗುಡ್ಡೆಗೆ ಹಿಂದೆ ರೂಢಿಯಲ್ಲಿದ್ದ ಶಿವ ಶ್ರೀಕೈಲಾಸ (ಪರ್ವತ)ವೆಂಬ

ಅಂಕಿತನಾಮವನ್ನಾಗಲಿ ಅಥವಾ ಧವಳೇಶ್ವರ ಪರ್ವತವೆಂಬ ದಿವ್ಯ ನಾಮವನ್ನಾಗಲಿ ಪ್ರಯೋಗಿಸಲಿಲ್ಲ. ಆ ಶಿಲಾಲೇಖದಲ್ಲಿ ಶ್ರೀಪರ್ವತವೆಂಬ ವಿಶಿಷ್ಟ ನಾಮವನ್ನು ಅವನು ಬರೆದಿರುವುದರಿಂದ ಈ ಅಭಿಪ್ರಾಯವು ಸಂದೇಹಾಸ್ಪದವಾಗಿದೆ. [ಶ್ರೀ ಬಿ. ರಾಜಶೇಖರಪ್ಪನವರು ಈ ಕುರಿತು ಬರೆದ ಲೇಖನವು Studies in Karnataka History and Culture Vol. II 1987 ಇದರಲ್ಲಿ ಪ್ರಕಟವಾಗಿದೆ.]

೨

ಕಾರ್ಕಳ ತಾಲೂಕಿನ ಹಿರಿಯಂಗಡಿಯ ಒಂದು ಪುಸ್ತಕದಲ್ಲಿ ಕಳಸ – ಕಾರ್ಕಳ ರಾಜ್ಯವನ್ನು ಪಾಲಿಸುತ್ತಿದ್ದ ಜಿನದತ್ತ ವಂಶದ ಅರಸನು ಕಳಸದಿಂದ ಸಿಸಿಲಕ್ಕೆ ತನ್ನ ರಾಜಧಾನಿಯನ್ನು ಸ್ಥಳಾಂತರ ಮಾಡಿದನೆಂದು ಸೂಚಿಸಲಾಗಿದೆ. ಆದರೆ ಈ ಅಭಿಲೇಖದಲ್ಲಿ ಅಕ್ಷರದೋಷವಿರುವುದರಿಂದ ಆ ರಾಜನು ಪ್ರಾರಂಭದಲ್ಲಿ ಬಂದು ವಾಸಿಸಿದ ಸ್ಥಳದ ಹೆಸರು ಸಿಸಿಲವೇ ಸಿಸುಕಲಿಯೋ ಎಂಬ ಸಂದೇಹ ವುಂಟಾಗುತ್ತದೆ. ಹಿಂದೆ ಪಟ್ಟಿ ಪೊಂಬುಚ್ಚಪುರದ ಅರಸರು ಶಿಶಿಲಪ್ರದೇಶಕ್ಕೂ ಪ್ರಭುಗಳಾಗಿದ್ದರೆಂದೂ ಅನಂತರ ಆ ವಂಶಕ್ಕೆ ಸೇರಿದ ಕಾರ್ಕಳದ ಭೈರರಸರು ಒಡೆಯರಾದರೆಂದೂ ಒಂದು ಭೌಗೋಲಿಕ ಚರಿತ್ರಕೋಶದಲ್ಲಿ ನಿರೂಪಿಸಲಾಗಿದೆ. ಆದುದರಿಂದ ಪಟ್ಟಿ ಪೊಂಬುಚ್ಚಪುರದ ಅರಸ ಲೋಕನಾಥ ದೇವನು ಪ್ರಾರಂಭದಲ್ಲಿ ಶಿಶಿಲ (ಸಿಸಿಲ)ಕ್ಕೆ ಬಂದು ಅರಮನೆಕಟ್ಟಿಸಿ ವಾಸ ಮಾಡಿದನೆಂದೂ ಅನಂತರ ಅವನು ಇಲ್ಲಿಂದ ಕಾರ್ಕಳಕ್ಕೆ ಹೋಗಿ ನೆಲಸಿದನೆಂದೂ ನಿರ್ಧರಿಸಬಹುದು. ಮತ್ತಿನ ಭೈರರಸರ ಕಾಲದಲ್ಲಿ ಅವರ ಸಂಬಂಧಿಗಳಾದ ಮೂಲವಂಶದ ಅರಸರಿಗೆ ಶಿಶಿಲ ಪ್ರದೇಶದ ಅಧಿಕಾರವು ಪ್ರಾಪ್ತವಾಯಿತೆಂದು ಎಣಿಸಬೇಕಾಗುತ್ತದೆ. ಕಾರ್ಕಳದ ಭೈರರಸರಿಗೂ ಶಿಶಿಲದ ಅರಸರಿಗೂ ನಿಕಟ ಸ್ನೇಹವಿತ್ತೆಂದು ಹಿರೇನೇಮೀಶ್ವರ ಬಸದಿಯ ಶಾಸನದಿಂದ ತಿಳಿಯುತ್ತದೆ.

ಶಿಶಿಲದ ಅರಸನ ಉಲ್ಲೇಖವಿರುವ ಹಿರಿಯಂಗಡಿಯ ಹಿರೇನೇಮೀಶ್ವರ ಬಸದಿಯ ಶಾಸನದಲ್ಲಿ ಶಾಲಿವಾಹನ ಶಕ ವರ್ಷದ ವಿವರವು ಲುಪ್ತವಾಗಿದೆ. ವಿಲಂಬಿ ಸಂವತ್ಸರದ ಭಾದ್ರಪದ ಬಹುಳ ದಶಮಿ ಗುರುವಾರದಲ್ಲಿ ಇದನ್ನು ಬರೆಯಲಾಗಿದೆಯೆಂದು ಇದರ ಒಕ್ಕಣೆಯಿಂದ ತಿಳಿಯುತ್ತದೆ. ಇದನ್ನು ಕ್ರಿಸ್ತಶಕ ೧೫೩೮ನೆಯ ವರ್ಷದ ಸಪ್ಟಂಬರ್ ತಿಂಗಳ ದಿನಾಂಕ ೧೯ನೆಯ ಗುರುವಾರದಲ್ಲಿ ಬರೆದಿರಬಹುದು. ಆದರೆ ಆ ದಿವಸ ಭಾದ್ರಪದ ಬಹುಳ ಏಕಾದಶಿ ತಿಥಿಯಾಗುವುದೆಂದು ಪ್ರಕಟಿತ ಹಿಂದೂ ಪಂಚಾಂಗ (ಇಂಡಿಯನ್ ಎಫಿಮೆರಿಸ್) ದಲ್ಲಿ ಸೂಚಿಸಲಾಗಿದೆ. ಬೇರೆ ಪ್ರಾಚೀನ ಪಂಚಾಂಗದಲ್ಲಿ ಅಂದು ದಶಮೀ ತಿಥಿ ಇದ್ದಿರಬಹುದು. ಸ್ಮಾರ್ತೈಕಾದಶಿ ಮತ್ತು ಭಾಗವತ ವೈಷ್ಣವೈಕಾದಶಿಗಳು ಬೇರೆ ಬೇರೆ ದಿನಗಳಲ್ಲಿ ಒಮ್ಮೊಮ್ಮೆ ಬರುವುದರಿಂದ ಈ ನಿರ್ಧಾರವು ತಪ್ಪಾಗದು. ಮತ್ತೆ ಕ್ರಿಸ್ತಶಕ ೧೫೪೮ನೆಯ ಸಪ್ಟಂಬರ್ ತಿಂಗಳ ೧೫ನೆಯ ದಿವಸದಲ್ಲಿ ವಿಳಂಬಿ ಸಂವತ್ಸರದ ಭಾದ್ರಪದ ಬಹುಳದಶಮಿ ಬರುತ್ತದೆ. ಆ ದಿನವೂ ಗುರುವಾರವಾಗುವುದಿಲ್ಲ, ಶುಕ್ರವಾರವಾಗುತ್ತದೆ. ಆ ಕಾಲದಲ್ಲಿ ಕಾರ್ಕಳದಲ್ಲಿ ವೀರಭೈರರಸ ಒಡೆಯನ ಆಳಿಕೆಯಿರಲಿಲ್ಲ. ಈ ಕಾರಣದಿಂದ ಕ್ರಿಸ್ತಶಕ ೧೫೩೮ನೆಯ ವರ್ಷದಲ್ಲಿ ಕಾರ್ಕಳದ ವೀರಭೈರರಸ ಒಡೆಯನ ಕುಮಾರ ಭೈರರಸ ಒಡೆಯನ ಮುಖಂಡತ್ವದಲ್ಲಿ ಈ ಒಡಂಬಡಿಕೆಯ ಶಾಸನವನ್ನು ಬರೆಯಲಾಯಿತೆಂದು ನಿರ್ಣಯಿಸಬಹುದು. ಅಳಿಯಕಟ್ಟಿನ ಪದ್ಧತಿಯಂತೆ ವೀರಭೈರರಸ ಒಡೆಯನ ಅನಂತರ ಅವನ ಸೋದರ ಅಳಿಯ ನಾಲ್ಕನೆಯ ಪಾಂಡ್ಯನು ರಾಜನಾದುದರಿಂದ ಕುಮಾರ ಭೈರರಸ ಒಡೆಯನ ಹೆಸರು ಮತ್ತಿನ ಅರಸು ಮನೆತನದ ನಿರೂಪಣೆಯಲ್ಲಿ ಕಾಣುವುದಿಲ್ಲ. ಈ ಶಾಸನದಂತೆ ವೀರಭೈರರಸ ಒಡೆಯನಿಗೆ ಮಗನಿದ್ದನೆಂಬ ವಿಚಾರವೂ ವ್ಯಕ್ತವಾಗುತ್ತದೆ. ಈ ಶಾಸನವನ್ನು ಪರಿಶೀಲಿಸಿದರೆ ಶಿಶಿಲದ ಅರಸರಿಗೆ ಭೈರರಸರೂ ಚೌಟರೂ ಅಜಿಲರೂ ದೇಸಿಂಗರಸರೂ ಮಿತ್ರರಾಗಿದ್ದರೆಂದು ಖಚಿತವಾಗುತ್ತದೆ.

ಸಂಸ್ಕೃತದ ಶಿಶು ಶಬ್ದವು ಸಿಸುವೆಂದೂ ಶ್ರೇಷ್ಠಿ ಶಬ್ದವು ಸೆಟ್ಟಿಯೆಂದೂ ತದ್ಭವವಾಗಿ ಕನ್ನಡ ತುಳು ಭಾಷೆಗಳಲ್ಲಿ ಪ್ರಯೋಗಗೊಂಡಂತೆ ಶ್ರೀ ಶೈಲವೆಂಬ ಸ್ಥಳನಾಮವು "ಸಿಸಿಲ"ವೆಂದು ರೂಪಾಂತರ ಗೊಂಡಿತೆಂದು ನಿರ್ಧರಿಸಹುದು. ಕನ್ನಡದ ಪ್ರಾಚೀನ ಕೃತಿಗಳಲ್ಲಿ ಸಿಸಿಲವೆಂಬ ನಾಮು ಪ್ರಯೋಗವೇ ಗೋಚರಿಸುತ್ತದೆ. ತುಳುವಿನಲ್ಲಿ ಈಗಲೂ ಸಿಸಿಲವೆಂಬ ಹೆಸರೇ ಬಳಕೆಯಲ್ಲಿದೆ: ಕೆಲವರು ಸೆಟ್ಟಿ ಎಂಬ ಶಬ್ದವನ್ನು ಶೆಟ್ಟಿಯೆಂದು ಉಚ್ಚರಿಸುವಂತೆ ಸಿಸಿಲವನ್ನು ಶಿಶಿಲ ವೆಂದು ವ್ಯತ್ಯಾಸಗೊಳಿಸಿ ಬ್ರಾಹ್ಮಣರು ಕರೆದರೆಂದು ಎಣಿಸಬಹುದು. ಆದುದರಿಂದ ಈಗ ಈ ಊರಿಗೆ ಕನ್ನಡದಲ್ಲಿ ಶಿಶಿಲವೆಂದೂ ತುಳುವಿನಲ್ಲಿ ಸಿಸಿಲವೆಂದೂ ಹೇಳುವ ರೂಢಿ ಪ್ರಚಾರದಲ್ಲಿದೆ.

—०—

ಒಪ್ಪೋಲೆ

		ತಪ್ಪು	ಒಪ್ಪು
ಪುಟ 1	ಸಾಲು 8	ಹ್ಯದ	ಹ್ರದ
" "	ಸಾಲು 12	ಗ್ರದ	ಹ್ರದ
" "	ಸಾಲು 22	ತೀರದಲ್ಲಿ	ತೀರದ
ಪುಟ 3	ಸಾಲು 7	ಭೂತಗ್ರಣಿ	ಭೂತಾಗ್ರಣಿ
ಪುಟ 4	ಸಾಲು 14	ಗ್ರದ	ಹ್ರದ
ಪುಟ 5	ಸಾಲು 18	ನಾಚಿ	ನಾಟಿ
ಪುಟ 6	ಸಾಲು 10	ವಿಶ್ಮಯ	ವಿಸ್ಮಯ
" "	ಸಾಲು 24	ಗ್ರಾಮಸ್ತ	ಗ್ರಾಮಸ್ಥ
ಪುಟ 8	ಸಾಲು 10	ಪರಿಹಾರ	ಪರಿವಾರ
" "	ಸಾಲು 11	ಸ್ಥಗಳನ್ನು	ಸ್ಥಳಗಳನ್ನು
" "	ಸಾಲು 18	ಸಿದ್ಧಾಂತಃಕರಣ	ಶುದ್ಧಾಂತಃಕರಣ
" "	ಸಾಲು 22	ಸಾನಿಧ್ಯ	ಸಾನ್ನಿಧ್ಯ
" "	ಸಾಲು 24	ಪ್ರತೀವರ್ಷವೂ	ಪ್ರತಿವರ್ಷವೂ
ಪುಟ 9	ಸಾಲು 7	ಆರಾಧಿಸಿದರು	ಆರಾಧಿಸಿದನು
ಪುಟ 10	ಸಾಲು 10	ವಿಶ್ಮಯ	ವಿಸ್ಮಯ
" "	ಸಾಲು 14	ಕಪಿಲ ನದಿ	ಕಪಿಲಾ ನದೀ
" "	ಸಾಲು 18	ಪ್ರಾರರಂಭಿಸಿದನು	ಪ್ರಾರಂಭಿಸಿದನು
" "	ಸಾಲು 19	ಮಂದಿವರ	ಮಂದಿರ
ಪುಟ 11	ಸಾಲು 10	ಪೊದಗಳು	ಪೊದಗಲು
" "	ಸಾಲು 12	ಮೂವತ್ತೊಂಬಸೆಯ	ಮೂವತ್ತೊಂದನೆಯ
ಪುಟ 12	ಸಾಲು 11	ಸ್ಮರಣಾರ್ತ	ಸ್ಮರಣಾರ್ಥ
ಪುಟ 14	ಸಾಲು 13	ಈತಂಡ	ಇತ್ತಂಡ
" "	ಸಾಲು 15	ವ್ಯಕ್ತಿಗಳು	ವ್ಯಕ್ತಿಗಳನ್ನು
" "	ಸಾಲು 23	ಸರೊವರ	ಸರೋವರ
ಪುಟ 15	ಸಾಲು 5	ವಿಭ್ರಜಿಸುತ್ತಿದೆ	ವಿಭ್ರಾಜಿಸುತ್ತಿದೆ
" "	ಸಾಲು 7	ಪಿಲಿ ಚಾಮುಂಡಿ	ಪಿಲಿಚಾಮುಂಡಿ
" "	ಸಾಲು 12	ರಥವೀದಿ	ರಥವೀಥಿ
" "	ಸಾಲು 13	ಗೊಚರಿಸುತ್ತಿವೆ	ಗೋಚರಿಸುತ್ತಿವೆ
" "	ಸಾಲು 15	ಶಿಕರದಲ್ಲಿ	ಶಿಖರದಲ್ಲಿ
ಪುಟ 16	ಸಾಲು 20	ಶಾಶ್ತ್ರೋಕ್ತ	ಶಾಸ್ತ್ರೋಕ್ತ
ಪುಟ 19	ಸಾಲು 17	ತಿರ್ಥಹ್ರದಲ್ಲಿ	ತೀರ್ಥಹ್ರದದಲ್ಲಿ

ಶಿಶಿಲದ ಇತಿಹಾಸ

		ತಪ್ಪು	ಒಪ್ಪು
ಪುಟ 2	ಸಾಲು 19	ಉರನ್ನು	ಊರನ್ನು
ಪುಟ 4	ಸಾಲು 2	ಹಾರಿಶ್ರೀ	ಹಾರಿತೀ
ಪುಟ 6	ಸಾಲು 8	ವ್ಯಕ್ತಗಳು	ವ್ಯಕ್ತಿಗಳು
ಪುಟ 7	ಸಾಲು 25	ಪ್ರಖ್ಯಾತ	ಪ್ರಖ್ಯಾತಿ
ಪುಟ 8	ಸಾಲು 12	ಪ್ರಸಸ್ತ	ಪ್ರಶಸ್ತ
ಪುಟ 9	ಸಾಲು 5	ಎರಡನೆಯ	ಒಂದನೆಯ
"	ಸಾಲು 10	ಬಸವಳಿ	ಬಸವಳ್ಳಿ
ಪುಟ 10	ಸಾಲು 8	ಉಪ್ರೇಕ್ಷೆ	ಉತ್ಪ್ರೇಕ್ಷೆ
ಪುಟ 12	ಸಾಲು 5	ಬಿನ್ನಾಳ	ಬಿನ್ನಾಣ
ಪುಟ 13	ಸಾಲು 12	ಪುನನಿರ್ಮಾಣ	ಪುನರ್ನಿರ್ಮಾಣ
ಪುಟ 13	ಸಾಲು 13	ಕೋಟೆಕಾರು	ಕೋಟೆತಾರು
"	ಸಾಲು 23	ರಾಜಧಾನಿಯಾದ	ರಾಜಧಾನಿಯೂ
ಪುಟ 14	ಸಾಲು 5	ಕ್ರಮವೆತೆಂದರೆ	ಕ್ರಮವೆಂತೆಂದರೆ
ಪುಟ 15	ಸಾಲು 20	ಶಿಶಿಲ	ಶಿಥಿಲ
ಪುಟ 16	ಸಾಲು 12	ಹೇಳುತ್ತಿದ	ಹೇಳುತ್ತಿದ್ದ

ಶ್ರೀ ಶಿಶಿಲೇಶ್ವರ ದೇವಾಲಯದಲ್ಲಿ ಜರಗುವ ದೇವ ಸೇವಾ ವಿವರ

ಶ್ರೀ ಶಿಶಿಲೇಶ್ವರ ಸನ್ನಿಧಿಯ ಪೂಜಾರ್ಚನೆಗಳು.

ಶತರುದ್ರಾಭಿಷೇಕ
ಏಕಾದಶರುದ್ರಾಭಿಷೇಕ
ರುದ್ರಾಭಿಷೇಕ
ಶಿವಸಹಸ್ರನಾಮಾರ್ಚನೆ
ತ್ರಿಶತಿನಾಮಾರ್ಚನೆ
ಅಷ್ಟೋತ್ತರ ಬಿಲ್ವಾರ್ಚನೆ
ಕಾರ್ತಿಕಪೂಜೆ
ಮಹಾಪೂಜೆ
ರಂಗಪೂಜೆ

ಮಹಾಗಣಪತಿ ಸನ್ನಿಧಿಯ ಪೂಜಾರ್ಚನೆಗಳು

ಅಥರ್ವಶೀರ್ಷಾಭಿಷೇಕ
ಗಣಪತಿ ಸಹಸ್ರನಾಮಾರ್ಚನೆ
ಅಷ್ಟೋತ್ತರ ಶತದೂರ್ವಾರ್ಚನೆ
ಏಕವಿಂಶತಿದೂರ್ವಾರ್ಚನೆ
ಪಂಚಕಜ್ಜಾಯಸಮರ್ಪಣೆ
ಅಪೂಪಸಮರ್ಪಣೆ
ಗಣಪತಿಹೋಮ
ರಂಗಪೂಜೆ



ಕಪಿಲಾ ನದಿಯ ಮತ್ಸ್ಯ ತೀರ್ಥ